☞ ಹಾವೇರಿ
☞ ಗದಗ
☞ ಧಾರವಾಡ
☞ ದಾವಣಗೆರೆ
☞ ಚಿತ್ರದುರ್ಗ
☞ ವಿಜಯನಗರ
☞ ಶಿವಮೊಗ್ಗ
☞ ಬಳ್ಳಾರಿ

ಸುದ್ದಿ, ಫೋಟೋ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ : 9480410207

ಪಾಂಡವ

PANDAVA Regional Kannada News Paper ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಪತ್ರಿಕೆ, ಜಾಹೀರಾತು ಇಸ್ತಿಯಾರನಾಮೆಗಳಿಗಾಗಿ ಸಂಪರ್ಕಿಸಿ : ಮೊಬೈಲ್ ನಂ. : 9742789207 7411679202

* Volume : XVII * Issue : 069 * THURSDAY 05, NOVEMBER 2026 * Editor : S.T. VEDAMURTHY * Page : 6 * Rs : 2.50 * RNI No. KARKAN/2011/39005 * PMG/KA/NK/HVR-028/2026-28 * pandavarnr@gmail.com * Mob No.: 9742789207

ಪ್ರಮುಖ ಸಂಕ್ಷಿಪ್ತ ಸುದ್ದಿ

ಪ್ರಶಸ್ತಿಗೆ ಅರ್ಜಿ ಆಹ್ವಾನ

ಪಾಂಡವ ನ್ಯೂಸ್, ಹಾವೇರಿ : ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಗಳಿಗೂ ಮೇಲ್ಪಟ್ಟ ಸೇವೆ ಸಲ್ಲಿಸುತ್ತಿರುವ /ಸಲ್ಲಿಸಿರುವ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಹಾವೇರಿ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ/ಸಂಸ್ಥೆ ಮತ್ತು ಶಿಕ್ಷಕರು ನಿಗದಿತ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 09-11-2026 ರೊಳಗೆ ಹಾವೇರಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.

ಅರ್ಜಿ ನಮೂನೆಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು, ಜಿಲ್ಲಾ ಕಚೇರಿ, ಹಾವೇರಿ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 04, ನೆಲಮಹಡಿ, ದೇವಗಿರಿ ಹಾವೇರಿ (ದೂರವಾಣಿ ಸಂಖ್ಯೆ: 08375-249014) ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಬುದ್ಧಿಮಾಂದ್ಯ ಮಗು ಪತ್ತೆ; ಮಗು ಪಡೆಯಲು ಪಾಲಕರಿಗೆ ಅವಕಾಶ

ಪಾಂಡವ ನ್ಯೂಸ್, ಹಾವೇರಿ : ಹಾವೇರಿ ರೈಲ್ವೆ ನಿಲ್ದಾಣದಲ್ಲಿ ಸೆಪ್ಟೆಂಬರ್ 24ರ ರಾತ್ರಿ ಸುಮಾರು 16 ವರ್ಷದ ಬುದ್ಧಿಮಾಂದ್ಯ ಹಾಗೂ ಅಂಗವಿಕಲ ಬಾಲಕನು ಸಿಕ್ಕಿದ್ದು, ಈ ಬಾಲಕನ ಕುರಿತು ಯಾವುದೇ ವಿಳಾಸ ಹಾಗೂ ದಾಖಲಾತಿಗಳು ಸಿಕ್ಕಿರುವುದಿಲ್ಲ, ಆದ್ದರಿಂದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯವರ ಆದೇಶ ಮೇರೆಗೆ ಬಾಲಕನನ್ನು ಅಭಿರಕ್ಷಣೆ ಮಾಡಿ ಹಾವೇರಿ ನಗರದ ನಿರಾಶ್ರಿತರ ವಸತಿ ಕೇಂದ್ರಕ್ಕೆ ದಾಖಿಲಿಸಲಾಗಿದೆ. ಆದ್ದರಿಂದ ಮಗುವಿನ ಜೈವಿಕ ಪಾಲಕರಿಗೆ ಮಾನವೀಯತೆಯ ಆಧಾರದ ಮೇಲೆ ಮಗುವನ್ನು ಮರಳಿ ಪಡೆಯಲು ಅವಕಾಶ ಇರುವುದರಿಂದ ಈ ಮೂಲಕ ಪ್ರಕಟಣೆ ನೀಡಲಾಗಿದೆ. ಆದಾಗ್ಯೂ ಬಾರದೇ ಹೋದಲ್ಲಿ ಮುಂದಿನ ಕಾನೂನು ಬದ್ಧ ಕ್ರಮಗಳನ್ನು ಜರುಗಿಸಲಾಗುವುದು. ತದನಂತರ ತಮಗೆ ಈ ಮಗುವಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದು ತಿಳಿಸಲಾಗಿದೆ.ಈ ಪ್ರಕಟಣೆಯ 60 ದಿನಗೊಳಗಾಗಿ ಈ ಮಗುವಿನ ಜೈವಿಕ ಪಾಲಕರಿಗೆ ಇದು ಒಂದು ಕಡೆ ಅವಕಾಶವಾಗಿರುತ್ತದೆ. ಸೂಕ್ತ ದಾಖಲಾತಿಯೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾವೇರಿ/ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಬರದೇ ಇದ್ದಲ್ಲಿ ಮಗುವಿನ ಮುಂದಿನ ಭವಿಷ್ಯದ ಹಿತದೃಷ್ಟಿಯಿಂದ ಪ್ರಕಟಣೆಗೊಂಡ 60 ದಿನಗಳ ನಂತರ ಮಗುವನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯಲ್ಲಿ ಪರಿತ್ಯಕ್ತ ಮಗುವೆಂದು ಪರಿಗಣಿಸಿ ಕಾನೂನು ಬದ್ಧ ಕ್ರಮಗಳನ್ನು ಜರುಗಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಪಾಂಡವ ನ್ಯೂಸ್, ಹಾವೇರಿ : ಮುಗದ-ಕಂಬಾರಗಣವಿ ರೇಲ್ವೆ ನಿಲ್ದಾಣಗಳ ಮಧ್ಯೆ 65 ರಿಂದ 70 ವರ್ಷದ ಪುರುಷ ರೈಲುಗಾಡಿಯಿಂದ ಬಿದ್ದು ಮೃತಪಟ್ಟಿದ್ದು, ಮೃತರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆಕೈಗೊಳ್ಳಲಾಗಿದೆ. ಮೃತ ವ್ಯಕ್ತಿ ವಾರಸುದಾರರು ಇದ್ದರೆ ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0836-2384751 ಅಥವಾ ಮೊ.9480802126 ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೋಟ್ ಚೋರಿ ಹೆಸರಿನಲ್ಲಿ ರಾಹುಲ್ ಗಾಂಧಿಯಿಂದ ಕಾಂಗ್ರೆಸ್ ಕಾರ್ಯಕರ್ತರ ದಿಕ್ಕು ತಪ್ಪಿಸುವ ಪ್ರಯತ್ನ; ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬಿಜೆಪಿ ಪಾದಯಾತ್ರೆ

ಕಾಂಗ್ರೆಸ್ ದೇಶದಲ್ಲಿ ಅರಾಜಕತೆ ಸೃಷ್ಟಿಸುತ್ತಿದೆ: ಬೊಮ್ಮಾಯಿ



ಪಾಂಡವ ನ್ಯೂಸ್, ಹಾವೇರಿ : ದೇಶದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಅರಾಜಕತೆ ಸೃಷ್ಟಿಸುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. 'ವೋಟ್ ಚೋರಿ' ಎಂಬ ಹೆಸರಿನಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕಾಂಗ್ರೆಸ್ ಕಾರ್ಯಕರ್ತರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ನಗರದಲ್ಲಿ ಬುಧವಾರ ಭಾರತೀಯ ಜನತಾ ಪಕ್ಷದ ಧಾರವಾಡ ವಿಭಾಗದ ವತಿಯಿಂದ ಆಯೋಜಿಸಿದ್ದ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ' ಪಾದಯಾತ್ರೆಯಲ್ಲಿ ಪಾಲ್ಗೊಂಡು ಕಾರ್ಯಕರ್ತರು ಹಾಗೂ ಸಾರ್ವಜನಿಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನದ ಆಶಯಗಳು ಹಾಗೂ ಜನರ ಹಕ್ಕುಗಳ ರಕ್ಷಣೆ ಅತ್ಯಂತ ಮಹತ್ವದ್ದಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪು ಅಂತಿಮವಾಗಿದ್ದು, ಚುನಾವಣಾ ವ್ಯವಸ್ಥೆಯ ಮೇಲೆ ಜನರಿಗೆ ನಂಬಿಕೆ ಇರಬೇಕು. ಆದರೆ, ಕಾಂಗ್ರೆಸ್ ತನ್ನ ರಾಜಕೀಯ ಹಿತಾಸಕ್ತಿಗಾಗಿ ಚುನಾವಣಾ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಸಂಸ್ಥೆಗಳ ಬಗ್ಗೆ ಅನುಮಾನ ಮೂಡಿಸುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ರಾಹುಲ್ ಗಾಂಧಿ ಅವರು 'ವೋಟ್ ಚೋರಿ' ಎಂಬ ಪದವನ್ನು ಮುಂದಿಟ್ಟುಕೊಂಡು ದೇಶಾದ್ಯಂತ ರಾಜಕೀಯ ಅಭಿಯಾನ ನಡೆಸುತ್ತಿದ್ದಾರೆ. ಇದರ ಮೂಲಕ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸಿ, ನೈಜ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಜನರನ್ನು ದಾರಿ ತಪ್ಪಿಸುವ ರಾಜಕಾರಣ ಸರಿಯಲ್ಲ ಎಂದು ಟೀಕಿಸಿದರು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹಲವು ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅದರ ಮೌಲ್ಯಗಳನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಸಂವಿಧಾನ ನೀಡಿರುವ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ಅಪನಂಬಿಕೆ ಮೂಡಿಸುವ ಬದಲು, ಜನರ ವಿಶ್ವಾಸ ಗಳಿಸುವ ಕೆಲಸ ಮಾಡಬೇಕು ಎಂದರು.

ಪ್ರಜಾಪ್ರಭುತ್ವದ ರಕ್ಷಣೆಗೆ ಪಾದಯಾತ್ರೆ : ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನದ ಆಶಯಗಳು ಹಾಗೂ ಜನರ ಹಕ್ಕುಗಳ ರಕ್ಷಣೆಯ ಸಂಕಲ್ಪದೊಂದಿಗೆ ಬಿಜೆಪಿ ಈ ಪಾದಯಾತ್ರೆ ಆಯೋಜಿಸಿತ್ತು. ಧಾರವಾಡ ವಿಭಾಗದ ವಿವಿಧ ಜಿಲ್ಲೆಗಳಿಂದ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಪಾದಯಾತ್ರೆಯ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಪ್ರಜಾಪ್ರಭುತ್ವದ ಆಶಯಗಳ ಕುರಿತು ಅರಿವು ಮೂಡಿಸುವುದು ಅಭಿಯಾನದ ಉದ್ದೇಶವಾಗಿತ್ತು.ಪಾದಯಾತ್ರೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಕ್ಷದ ಧ್ವಜಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತ ಸಾಗಿದರು. ಮುಖಂಡರು ಕಾರ್ಯಕರ್ತರೊಂದಿಗೆ ಹೆಜ್ಜೆ ಹಾಕಿ ಅಭಿಯಾನಕ್ಕೆ ಬೆಂಬಲ ಸೂಚಿಸಿದರು. ಹಾವೇರಿ ನಗರದ ಪ್ರಮುಖ ರಸ್ತೆಗಳಲ್ಲಿ ನಡೆದ ಪಾದಯಾತ್ರೆಯಲ್ಲಿ ಪಕ್ಷದ ಸಂಘಟನಾ ಶಕ್ತಿ ಹಾಗೂ ಕಾರ್ಯಕರ್ತರ ಉತ್ಸಾಹ ಕಂಡುಬಂತು.

3ನೇ ಪುಟಕ್ಕೆ ▶▶▶

ಮೂರು ವರ್ಷವಾದರೂ ಸಿಗದ ಅಂಗವಿಕಲ ಪಿಂಚಣಿ!



ಪಾಂಡವ ನ್ಯೂಸ್, ಹಾವೇರಿ: ಅಂಗವಿಕಲ ಮಗನಿಗೆ ಸರ್ಕಾರದ ಮಾಸಿಕ ಪಿಂಚಣಿ ಕೊಡಿಸಲು ಕಳೆದ ಮೂರು ವರ್ಷಗಳಿಂದ ಸರ್ಕಾರಿ ಕಚೇರಿಗಳಿಗೆ ಅಲೆದಾಡುತ್ತಿರುವ ವೃದ್ಧ ತಂದೆತಾಯಿಗಳ ಸಂಕಷ್ಟ ಕೊನೆಗೂ ಜಿಲ್ಲಾಧಿಕಾರಿಗಳ ಗಮನ ಸೆಳೆದಿದೆ. ಸಮಸ್ಯೆ ಆಲಿಸಿದ ಜಿಲ್ಲಾಧಿಕಾರಿಗಳು ಶೀಘ್ರ ಪರಿಹಾರ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಹಾವೇರಿ ತಾಲೂಕಿನ ಕನಕಾಪುರ ಗ್ರಾಮದ ಕವಿ ಕೇಳದ, ಮಾತು ಬಾರದ ಅಂಗವಿಕಲ ಯುವಕ ರಾಜು ಕೋಟ್ಯಾಳನಿಗೆ ಸರ್ಕಾರದ ಪಿಂಚಣಿ ಸೌಲಭ್ಯ ಕೊಡಿಸಲು ವೃದ್ಧ ತಂದೆತಾಯಿಗಳು ಸತತ ಪ್ರಯತ್ನ ನಡೆಸುತ್ತಿದ್ದಾರೆ. ಮಗನನ್ನು ಹೊತ್ತುಕೊಂಡೇ ಕಚೇರಿಯಿಂದ ಕಚೇರಿಗೆ ಅಲೆದಾಡಿದರೂ ಮೂರು ವರ್ಷಗಳಿಂದ ಪಿಂಚಣಿ ಭಾಗ್ಯ ದೊರೆತಿಲ್ಲ.

ಒಮ್ಮೆ ತಾಂತ್ರಿಕ ಸಮಸ್ಯೆಯ ನೆಪ, ಮತ್ತೊಮ್ಮೆ ಹೆಬ್ಬೆಟ್ಟು ಗುರುತು ಬರುತ್ತಿಲ್ಲ ಎಂಬ ಕಾರಣ. ಕೊನೆಗೆ ಬೆಂಗಳೂರಿಗೆ ತೆರಳುವಂತೆ ಅಧಿಕಾರಿಗಳ ಸೂಚನೆ. ಹೀಗೆ ಒಂದಲ್ಲೊಂದು ಕಾರಣಗಳಿಂದ ವೃದ್ಧ ದಂಪತಿಯ ಅಲೆದಾಟ ಮುಂದುವರಿದಿದೆ. ಮಗನ ಆರೈಕೆಯ ಜತೆಗೆ ಸರ್ಕಾರಿ ಕಚೇರಿಗಳ ಮೆಟ್ಟಿಲೇರುತ್ತಿರುವ ದಂಪತಿ ದಿಕ್ಕು ತೋಚದ ಸ್ಥಿತಿಗೆ ತಲುಪಿದ್ದರು.

ಡಿಸಿ ಕಚೇರಿ ಎದುರು ಅಳಲು: ಎಲ್ಲೆಡೆ ಅಲೆದಾಡಿ ಸುಸ್ತಾದ ವೃದ್ಧ ದಂಪತಿ, ಜಿಲ್ಲಾಧಿಕಾರಿಗಳಾದ ವಿಜಯ ಮಹಾಂತೇಶ ದಾನಮ್ಮನವರ ಅವರು ತಮ್ಮ ಸಮಸ್ಯೆಗೆ ಪರಿಹಾರ ಕಲ್ಪಿಸಬಹುದು ಎಂಬ ನಿರೀಕ್ಷೆಯೊಂದಿಗೆ ಅಂಗವಿಕಲ ಮಗನನ್ನು ಕರೆದುಕೊಂಡು ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಕುಳಿತು ತಮ್ಮ ಅಳಲು ತೋಡಿಕೊಂಡರು.

2ನೇ ಪುಟಕ್ಕೆ ▶▶▶

ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸಿ : ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ



ಪಾಂಡವ ನ್ಯೂಸ್, ಹಾವೇರಿ : ಜಿಲ್ಲಾದ್ಯಾದಂತ ನವೆಂಬರ್ 8 ರಿಂದ ಆಚರಿಸಲಿರುವ ದೀಪಾವಳಿ ಹಬ್ಬವನ್ನು ಆರೋಗ್ಯಯುತ ಮತ್ತು ಸುಂದರ ಪರಿಸರವನ್ನು ಉಳಿಸಲು ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸೋಣ ಎಂದು ಜಿಲ್ಲಾಧಿಕಾರಿ ಡಾ.ವಿ-ಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.


ಹಬ್ಬದ ಸಂದರ್ಭದಲ್ಲಿ ಸಿಡಿಸುವ ಪಟಾಕಿಗಳು ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯವನ್ನು ಉಂಟು ಮಾಡಿ ಪರಿಸರಕ್ಕೆ ಹಾನಿ ಮಾಡುತ್ತಿದೆ ಹಾಗೂ ಜನರ ಆರೋಗ್ಯವನ್ನು ಹದಗೆಡಿಸುತ್ತಿದೆ. ಪ್ರಾಣಿ-ಪಕ್ಷಿಗಳ ಕಲರವಕ್ಕೆ ಘಾಸಿ ಉಂಟುಮಾಡುತ್ತಿದೆ. ಆದ್ದರಿಂದ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಸರಳ ರೀತಿಯಲ್ಲಿ ಮಾಲಿನ್ಯ ರಹಿತವಾಗಿ ಮತ್ತು ಭಕ್ತಿ ಪೂರ್ವಕವಾಗಿ ಆಚರಿಸಬೇಕು ಎಂದು ಕೋರಿದ್ದಾರೆ.

ದೀಪಾವಳಿ ಬೆಳಕಿನ ಹಬ್ಬ, ಎಲ್ಲರೂ ಸಂಭ್ರಮ ಹಾಗೂ ಸಡಗರದಿಂದ ಆಚ-ರಿಸುವ ಹಬ್ಬ, ಪಟಾಕಿಗಳನ್ನು ಬಳಸುವಾಗ ಎಚ್ಚರವಿರಲಿ, ಸ್ವಲ್ಪ ಮೈಮರೆತಲ್ಲಿ ಜೀವನದ ಬೆಳಕನ್ನೇ ಕಸಿದುಕೊಳ್ಳಬಹುದು. ಹಬ್ಬದ ಆಚರಣೆ ಜಾಗರೂಕತೆ ಹಾಗೂ ಸುರಕ್ಷತೆಯಿಂದ ಕೂಡಿರಲಿ ಎಂದು ತಿಳಿಸಿದ್ದಾರೆ.

ಹಸಿರು ಪಟಾಕಿ ಗುರುತಿಸುವಿಕೆ: ಪಟಾಕಿ ಬಾಕ್ಸ್‌ಗಳ ಮೇಲೆ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್(CSIR) ಮತ್ತು ನ್ಯಾಷನಲ್ ಎನ್ವಿರಾಂಮೆಂಟಲ್ ಇಂಜಿನಿಯರಿಂಗ್ ರಿಸರ್ಚ್ ಇನ್ಸ್‌ಟಿಟ್ಯೂಟ್ (NEERI) ಇವರ ಲೋಗೋ ಹಾಗೂ ನೊಂದಿತ ಸಂಖ್ಯೆಯೊಂದಿಗೆ ಮುದ್ರಿತವಾಗಿರಬೇಕು. ಅಧೀಕೃತ ಮಾರಾಟಗಾರರು ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರದಿಂದ ನೀಡುವ ಪರವಾನಗಿಯಲ್ಲಿ ನಿಗಧಿಪಡಿಸಿರುವ ದಿನಾಂಕ ಮತ್ತು ಸ್ಥಳಗಳಲ್ಲಿ ಮಾತ್ರ ತಾತ್ಕಾಲಿಕ ಪಟಾಕಿ ಅಂಗಡಿಗಳನ್ನು ಇಡಬೇಕು.

2ನೇ ಪುಟಕ್ಕೆ ▶▶▶

ರಾಹುಲ್ ಗಾಂಧಿ ಸೋರಸ್ ಹಣ ಪಡೆದು ಪ್ರಜಾಪ್ರಭುತ್ವ ದುರ್ಬಲಗೊಳಿಸುವ ಯತ್ನ: ಬೊಮ್ಮಾಯಿ



ಪಾಂಡವ ನ್ಯೂಸ್, ಹುಬ್ಬಳ್ಳಿ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶಿ ಶಕ್ತಿಗಳೊಂದಿಗೆ ಕೈಜೋಡಿಸಿ, ಸೋರಸ್‌ನಿಂದ ಹಣ ಪಡೆದು ಭಾರತದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಮಾಧ್ಯಮ ಹೇಳಿಕೆ ನೀಡಿರುವ ಅವರು, ರಾಹುಲ್ ಗಾಂಧಿ ಹತಾಶ ರಾಜಕಾರಣಿಯಾಗಿದ್ದು, ತಮ್ಮ ಮೇಲಿನ ಆರೋಪಗಳನ್ನು ಇತರರ ಮೇಲೆ ಹೊರಿಸುವ ಪ್ರವೃತ್ತಿ ಹೊಂದಿದ್ದಾರೆ. ಪದೇಪದೆ ವಿದೇಶ ಪ್ರವಾಸ ಕೈಗೊಳ್ಳುವ ಅವರು, ಭಾರತ ವಿರೋಧಿ ಬಣಗಳೊಂದಿಗೆ ಗುರುತಿಸಿಕೊಂಡು ದೇಶದ ಪ್ರಜಾಪ್ರಭುತ್ವದ ಕುರಿತು ವಿದೇಶಗಳಲ್ಲಿ ಟೀಕೆ ಮಾಡುತ್ತಿದ್ದಾರೆ ಎಂದು ದೂರಿದರು.ಸೋರಸ್ ಜತೆ ರಾಹುಲ್ ಗಾಂಧಿ ಸಂಪರ್ಕ ಹೊಂದಿದ್ದಾರೆ ಎಂಬ ಆರೋಪವಿದ್ದು, ಅದರ ಮೂಲಕ ಕೋಟ್ಯಂತರ ರೂಪಾಯಿ ಹಣ ಹರಿದುಬಂದಿದೆ. ಹಣ ನೀಡಿದವರನ್ನು ಸಮಾಧಾನಪಡಿಸುವ ಉದ್ದೇಶದಿಂದಲೇ ಇಂತಹ ಚಳವಳಿಗಳನ್ನು ನಡೆಸಲಾಗುತ್ತಿದೆ ಎಂದು ಬೊಮ್ಮಾಯಿ ಆರೋಪಿಸಿದರು. ಕಾಂಗ್ರೆಸ್‌ಗೆ ವಿದೇಶಿ ಹಣ ಹರಿದುಬರುತ್ತಿದ್ದು, ಅದರ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದಲ್ಲದೆ, ದೇಶದ ಅಖಂಡತೆ ಮತ್ತು ಏಕತೆಗೆ ಧಕ್ಕೆ ತರುವ ಪ್ರಯತ್ನ ನಡೆಯುತ್ತಿರುವುದು ಕಳವಳಕಾರಿ ಸಂಗತಿ ಎಂದರು.ಮೋದಿ ಸೂರ್ಯನಿದ್ದಂತೆ : ಪ್ರಧಾನಿ ನರೇಂದ್ರ ಮೋದಿ ಅವರು ವೈಯಕ್ತಿಕ ಹಿತಾಸಕ್ತಿಗಿಂತ ದೇಶದ ಹಿತಕ್ಕೆ ಆದ್ಯತೆ ನೀಡಿ, ಜೀವನವನ್ನೇ ರಾಷ್ಟ್ರಸೇವೆಗೆ ಮುಡುಪಿಟ್ಟಿದ್ದಾರೆ. ಅಂತಹ ನಾಯಕನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುವುದು ದೇಶದ ಕೋಟ್ಯಂತರ ದೇಶಾಭಿಮಾನಿಗಳಿಗೆ ಮಾಡಿದ ಅವಮಾನವಾಗಿದೆ. ಮೋದಿ ಅವರು ಸೂರ್ಯನಿದ್ದಂತೆ ಎಂದು ಬೊಮ್ಮಾಯಿ ಹೇಳಿದರು.2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣ ಹಾಗೂ ಆತ್ಮನಿರ್ಭರ ಭಾರತ ಸಾಕಾರಗೊಳಿಸುವ ಸಂಕಲ್ಪವನ್ನು ಪ್ರಧಾನಿ ಹೊಂದಿದ್ದಾರೆ. ಈ ಗುರಿ ಸಾಧನೆಗೆ ಎಲ್ಲರೂ ಬೆಂಬಲವಾಗಿ ನಿಲ್ಲಬೇಕು. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದು, ಭಾರತವನ್ನು ಜಾಗತಿಕ ಮಟ್ಟದಲ್ಲಿ ನಾಯಕತ್ವದ ಸ್ಥಾನಕ್ಕೇರಿಸಲು ಸಂಕಲ್ಪ ಮಾಡಬೇಕು ಎಂದು ಅವರು ತಿಳಿಸಿದರು.

ರಾಷ್ಟ್ರೀಯ ದತ್ತು ಮಾಸಾಚರಣೆ

ಪಾಂಡವ ನ್ಯೂಸ್, ಹಾವೇರಿ : ನವ್ಹೆಂಬರ್-2026 ತಿಂಗಳನ್ನು ರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಪ್ರತಿ ಮಗುವೂ ಕೌಟುಂಬಿಕ ವ್ಯವಸ್ಥ

ಮೊದಲ ಪುಟದಿಂದ.....

ಮೂರು ವರ್ಷವಾದರೂ.....

ದಂಪತಿಯ ಸಂಕಷ್ಟವನ್ನು ಆಲಿಸಿದ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರು, ಪ್ರಕರಣದ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಶೀಘ್ರ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು. ಅಲ್ಲದೆ, ಕೈಗೊಂಡ ಕ್ರಮದ ಕುರಿತು ವರದಿ ಸಲ್ಲಿಸುವಂತೆಯೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಾನವೀಯ ಸ್ಪಂದನೆಗೆ ನಿರೀಕ್ಷೆ: ಸರ್ಕಾರದ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳು ವರ್ಷಗಟ್ಟಲೆ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಬದಲಾಗಬೇಕಿದೆ. ತಾಂತ್ರಿಕ ಸಮಸ್ಯೆಗಳನ್ನು ನೆಪವಾಗಿಸಿಕೊಳ್ಳದೆ ಮಾನವೀಯ ನೆಲೆಯಲ್ಲಿ ಪರಿಶೀಲಿಸಿ ಅರ್ಹ–ರಿಗೆ ಸೌಲಭ್ಯ ತಲುಪಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ.

ಮೂರು ವರ್ಷಗಳಿಂದ ಪಿಂಚಣಿಗಾಗಿ ಪರದಾಡುತ್ತಿರುವ ರಾಜು ಕೋಟ್ಯಾಳನಿಗೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ಶೀಘ್ರ ಮಾಸಿಕ ಪಿಂಚಣಿ ದೊರೆಯಲಿದೆಯೇ ಎಂಬ ನಿರೀಕ್ಷೆ ಇದೀಗ ವೃದ್ಧ ತಂದೆತಾಯಿಗಳಲ್ಲಿ ಮೂಡಿದೆ. ಜಿಲ್ಲಾಧಿಕಾರಿಗಳ ಮಧ್ಯಪ್ರವೇಶದಿಂದ ದಂಪತಿಯ ಅಲೆದಾಟಕ್ಕೆ ಶಾಶ್ವತ ಪರಿಹಾರ ಸಿಗಲಿ ಎಂಬುದು ಸಾರ್ವಜನಿಕರ ಆಶಯವಾಗಿದೆ.

ಮೊದಲ ಪುಟದಿಂದ.....

ಕಾಂಗ್ರೆಸ್ ದೇಶದಲ್ಲಿ .....

ಈ ಸಂದರ್ಭದಲ್ಲಿ ಬಿಜೆಪಿ ಹಾವೇರಿ ಜಿಲ್ಲಾಧ್ಯಕ್ಷ ವೀರಭದ್ರಪ್ಪ ಬಳ್ಳಾರಿ, ಮಾಜಿ ಸಚಿವರಾದ ಸಿ.ಸಿ. ಪಾಟೀಲ ಹಾಗೂ ಬಿ.ಸಿ. ಪಾಟೀಲ, ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ ಹಾಗೂ ಡಾ. ಚಂದ್ರು ಲಮಾಣಿ, ಮಾಜಿ ಶಾಸಕರಾದ ಶಿವರಾಜ ಸಜ್ಜನ ಹಾಗೂ ಅರುಣಕುಮಾರ ಪೂಜಾರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ ಹಾಗೂ ಲಿಂಗರಾಜ ಪಾಟೀಲ, ಮಾಜಿ ವಿಧಾನ ಪರಿಷತ್ ಸದಸ್ಯ ನಾಗರಾಜ ಛಬ್ಬಿ ಉಪಸ್ಥಿತರಿದ್ದರು.

ಧಾರವಾಡ ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜು ಕುರಡಗಿ, ಮುಖಂಡರಾದ ಭರತ ಬೊಮ್ಮಾಯಿ, ಗವಿಸಿದ್ದಪ್ಪ ದ್ಯಾಮಣ್ಣವರ, ಜಯತೀರ್ಥ ಕಟ್ಟಿ, ಭೋಜರಾಜ ಕರೂದಿ, ಡಾ. ಬಸವರಾಜ ಕೇಲಗಾರ ಸೇರಿದಂತೆ ಪಕ್ಷದ ಹಲವು ಪ್ರಮುಖರು, ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಅರಾಜಕತೆಯ ವಿರುದ್ಧದ ಹೋರಾಟದಲ್ಲಿ ಬಿಜೆಪಿಯ ಸಂಕಲ್ಪ ಅಚಲವಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮುಂದುವರಿಯಲಿದೆ ಎಂಬ ಸಂದೇಶವನ್ನು ಪಾದಯಾತ್ರೆ ಮೂಲಕ ಮುಖಂಡರು ಸಾರಿದರು.

ಮೊದಲ ಪುಟದಿಂದ.....

ರಾಜೀ ಮೂಲಕ ಪ್ರಕರಣಗ.....

ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

43 ಸಾವಿರ ಪ್ರಕರಣ ಬಾಕಿ: ಜಿಲ್ಲೆಯಲ್ಲಿ 43,974 ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 3863 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಗುರುತಿಸಲಾಗಿದೆ ಹಾಗೂ 947 ವಾಜ್ಯಪೂರ್ವ ಪ್ರಕರಣಗಳು ನೋಂದಣಿಯಾಗಿವೆ ಎಂದರು.ವಿಶೇಷ ಲೋಕ ಅದಾಲತ್ : ಜಿಲ್ಲೆಯಲ್ಲಿ ನವಂಬರ್ 21 ರಂದು ವಿಶೇಷ ಲೋಕ ಅದಾಲತ್ ಜರುಗಲಿದ್ದು, ಈ ವಿಶೇಷ ಲೋಕ ಅದಾಲತ್‌ನಲ್ಲಿ 138 ಎನ್‌ಐ ಕಾಯ್ದೆಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದು ಎಂದು ತಿಳಿಸಿದರು. ಮಧ್ಯಸ್ಥಿಕೆ–3.0 ಅಭಿಯಾನ ಸಹ ಮುಂದುವರೆದಿದ್ದು, ಈ ಅಭಿಯಾನದಲ್ಲಿ 24 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಧಾರವಾಡದ ಖಾಯಂ ಜನತಾ ನ್ಯಾಯಾಲಯ ಇದೆ. ಕಕ್ಷಿದಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.ಲೋಕ ಅದಾಲತ್‌ನ ಪ್ರಯೋಜನಗಳು: ನ್ಯಾಯಾಲಯಗಳಲ್ಲಿ ಉಭಯ ಪಕ್ಷದಾರರು ರಾಜೀ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಲಾಗುವುದು, ಇಬ್ಬರಿಗೂ ಒಪ್ಪಿಗೆಯಾಗುವಂತೆ ಪ್ರಕರಣವು ತೀರ್ಮಾನವಾಗುವುದ–ರಿಂದ ಬಾಂಧವ್ಯವು ಉಳಿದು ವಿವಾದವು ತೀರ್ಮಾನವಾಗುತ್ತದೆ. ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ಪ್ರಕರಣಗಳನ್ನು) ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ವ್ಯಾಜ್ಯಪೂರ್ವ ಪ್ರಕರಣಗಳಲ್ಲಿ ನ್ಯಾಯಾಲಯ ಶುಲ್ಕ ಕೊಡಬೇಕಾಗಿಲ್ಲ, ರಾಜೀ ಸಂಧಾನದ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು ಎಂದರು.ಶೇ.50ರಷ್ಟು ರಿಯಾಯಿತಿ: ಸಂಚಾರ ನಿಯಮ ಉಲ್ಲಂಘನೆಯ ಬಾಕಿ ಪ್ರಕರಣಗಳ ದಂಡ ಮೊತ್ತ ಪಾವತಿಗೆ ಕರ್ನಾಟಕ ಸರ್ಕಾರ ಆದೇಶದಂತೆ ಶೇ.50ರಷ್ಟು ರಿಯಾಯತಿ ದರದಲ್ಲಿ ದಂಡ ಪಾವತಿಸಲು 1991 ರಿಂದ 2025 ಪ್ರಕರಣಗಳಿಗೆ ದಿನಾಂಕ 21–11–2026 ರಿಂದ ದಿನಾಂಕ 11–12–2026ರವರೆಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು. ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಪ್ರಯುಕ್ತ ನ.5 ರಿಂದ 13ರವರೆಗೆ ಜಿಲ್ಲೆಯ ಎಲ್ಲ ಶಾಲಾ–ಕಾಲೇಜುಗಳಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಆಚರಿಸಲಾಗುತ್ತಿದೆ. ಸುರಕ್ಷಿತ ಬಚಪನ್ ಅಭಿಯಾನ ಅಂಗವಾಗಿ ಆಯ್ದ ಶಾಲಾ–ಕಾಲೇಜುಗಳಲ್ಲಿ ಕಾನೂನು ಅರಿವು ಹಾಗೂ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥವಾದ ಪ್ರಕರಣಗಳ ಮೇಲೆ ಅಪೀಲ್ ಹೋಗಲು ಅವಕಾಶವಿರುವುದಿಲ್ಲ. ಕಾನೂನು ನೆರವಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಹಾವೇರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ಸಮಿತಿಗಳನ್ನು ಹಾಗೂ ಟೋಲ್ ಫ್ರಿ ಸಂಖ್ಯೆ 15100 ಸಂಪರ್ಕಿಸಬಹುದು ಎಂದು ತಿಳಿಸಿದರು.ಮಾಧ್ಯಮಗೋಷ್ಠಿಯಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶ್ರೀಶೈಲಜಾ ಉಪಸ್ಥಿತರಿದ್ದರು.

ಮೊದಲ ಪುಟದಿಂದ.....

ಪರಿಸರ ಸ್ನೇಹಿ ದೀಪಾವಳಿ.....

ನಿಷೇಧಿತ ಪಟಾಕಿಗಳ ಮಾರಾಟ ಕಂಡುಬಂದಲ್ಲಿ ಅಂತಹ ಪಟಾಕಿಗಳನ್ನು ವಶಪಡಿಸಿಕೊಳ್ಳಲಾಗುವುದು ಮತ್ತು ನಿಯಮಗಳನ್ವಯ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಬೆಳಕಿನ ಹಬ್ಬ: ಸಾಧ್ಯವಾದಷ್ಟು ಹಣತೆ ದೀಪ ಹಚ್ಚುವ ಮೂಲಕ ಬೆಳಕಿನ ಹಬ್ಬ ದೀಪಾವಳಿಯನ್ನು ಪರಿಸರ ಸ್ನೇಹಿಯಾಗಿ ಆಚರಿಸೋಣ. ಅಪಾರ್ಟ್‌ಮೆಂಟ್,ವಠಾರ,ನೆರೆಹೊರೆಯ ಮನೆಯವರು ಒಂದೆಡೆ ಕಲೆತು ಪರಿಸರ ಸ್ನೇಹಿ ದೀಪಾವಳಿ ಹಬ್ಬವನ್ನು ಆಚರಿಸಿ. ಹಬ್ಬದ ಆಚರಣೆಯಲ್ಲಿ ಬೆಳಕೇ ಪ್ರಧಾನವಾಗಿರಲಿ.ಗಿಡ–ಮರಗಳು ಮತ್ತು ಪ್ರಾಣಿ–ಪಕ್ಷಿಗಳಿಗೆ ಯಾವುದೇ ಹಾನಿಯಾಗದಂತೆ ಎಚ್ಚರವಹಿಸಿ. ಶಾಶ್ವತ ಕುರುಡತನ, ಕಿವುಡುತನಗಳಿಗೆ ಎಡೆಮಾಡಿಕೊಡದಿರಿ. ಪಟಾಕಿಗಳನ್ನು ಖರೀದಿಸುವ ಮುನ್ನ ಹಸಿರು ಪಟಾಕಿಗಳ ಲೇಬಲ್‌ಗಳನ್ನು ಪರಿಶೀಲಿಸಿ ಖರೀದಿಸಲು ಕೋರಿದೆ. ನಿಷೇಧ: ಶಿಕ್ಷಣ ಸಂಸ್ಥೆ, ಆಸ್ಪತ್ರೆ ಮತ್ತು ವೃದ್ಧಾಶ್ರಮಗಳಂತಹ ಸೂಕ್ಷ್ಮ ಪ್ರದೇಶಗಳ ಹತ್ತಿರ ಪಟಾಕಿ ಸಿಡಿಸುವುದನ್ನು ನಿಷೇಧಿಸಲಾಗಿದೆ. 125 ಡೆಸಿಬಲ್‌ಗೂ (ಮೇಲ್ಪಟ್ಟ ಪಟಾಕಿಗಳ ಸಿಡಿತವನ್ನು ನಿಷೇಧಿಸಲಾಗಿದೆ. ಪಟಾಕಿಗಳ ಸಿಡಿತದ ನಂತರ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯಬಾರದು. ಸ್ಥಳೀಯ ಸಂಸ್ಥೆಗಳು ನಿಗದಿಪಡಿಸಿದ ಕಸವನ್ನು ವಿಲೇವಾರಿ ಮಾಡುವ ವಾಹನಗಳಿಗೆ ನೀಡಬೇಕು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 728/2015, ದಿನಾಂಕ 23–10–2018 ಮತ್ತು 31–10–2018 ನೀಡಿದ ತೀರ್ಪಿನ ನಿರ್ದೇಶನದಂತೆ ಹಸಿರು ಪಟಾಕಿಯನ್ನು ಹೊರತುಪಡಿಸಿ ಇನ್ಯಾವುದೇ ಪಟಾಕಿಗಳನ್ನು ಹಬ್ಬದ ಸಮಯದಲ್ಲಿ ರಾತ್ರಿ 08 ಗಂಟೆಯಿಂದ 10ವರೆಗೆ ಮಾತ್ರ ಪಟಾಕಿಗಳನ್ನು ಸ್ಫೋಟಿಸಲು ಅವಕಾಶವಿದೆ. ಉಳಿದ ಸಮಯದಲ್ಲಿ ಪಟಾಕಿಗಳ ಸ್ಫೋಟವನ್ನು ನಿಷೇಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಸೌಲಭ್ಯ ತಲುಪಿಸಿ: ತಹಶೀಲ್ದಾರ್ ಸಾರಿಕಾ ಶಿಂಗನಮಕ್ಕಿ

46 ಅರ್ಜಿ ಸ್ವೀಕಾರ; ಸ್ಥಳದಲ್ಲೇ 6 ಅರ್ಜಿ ಇತ್ಯರ್ಥ



ಪಾಂಡವ ನ್ಯೂಸ್, ಬ್ಯಾಡಗಿ : ಗ್ರಾಮೀಣ ಭಾಗದ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳು ತಲುಪಬೇಕು. ಸರ್ಕಾರಿ ಕಚೇರಿಗಳಿಗೆ ಜನರು ಅಲೆದಾಡುವುದನ್ನು ತಪ್ಪಿಸಿ, ಆಡಳಿತ ವ್ಯವಸ್ಥೆಯೇ ಜನರ ಬಳಿಗೆ ತೆರಳಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಪ್ರಜಾ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಸಾರಿಕಾ ಶಿಂಗನಮಕ್ಕಿ ಹೇಳಿದರು.

ತಾಲೂಕಿನ ಮಾಸಣಗಿ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಪ್ರಜಾ ಸೇವಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಯೋಜನೆಗಳ ಕುರಿತು ಗ್ರಾಮೀಣ ಜನರಲ್ಲಿ ಅರಿವು ಮೂಡಿಸುವುದರ ಜತೆಗೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಿ, ಬಾಕಿ ಇರುವ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಬೇಕು ಎಂದು ಸೂಚಿಸಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಮಾತನಾಡಿ, ವಸತಿ ಸೌಲಭ್ಯದಿಂದ ವಂಚಿತರಾಗಿರುವ ಅರ್ಹ ಫಲಾನುಭವಿಗಳ ಮಾಹಿತಿ ಸಂಗ್ರಹಿಸಿ, ಸರ್ಕಾರದ ನಿಯಮಾನುಸಾರ ಮನೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಅರ್ಹರು ಅಗತ್ಯ ದಾಖಲೆಗಳೊಂದಿಗೆ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಬೇಕು ಎಂದರು.

ಆರು ತಿಂಗಳಿಂದ ಪಿಂಚಣಿ ಸ್ಥಗಿತ : ವಕೀಲ ಬಸವರಾಜ ಬನ್ನಿಹಟ್ಟಿ ಮಾತನಾಡಿ, ಮಾಸಣಗಿ ಗ್ರಾಮದಲ್ಲಿ ಸುಮಾರು 60 ಜನರಿಗೆ ಕಳೆದ ಆರು ತಿಂಗಳಿಂದ ವೃದ್ಧಾಪ್ಯ ವೇತನ ಸ್ಥಗಿತಗೊಂಡಿದೆ. ಶಾಲಾ ದಾಖಲೆ ಹಾಗೂ ಆಧಾರ್ ಕಾರ್ಡ್‌ನಲ್ಲಿನ ಜನ್ಮದಿನಾಂಕ ವ್ಯತ್ಯಾಸದಿಂದ ಪಿಂಚಣಿ ಪಡೆಯಲು ತೊಂದರೆಯಾಗುತ್ತಿದೆ. ಅಧಿಕಾರಿಗಳು ಕೂಡಲೇ ದಾಖಲೆಗಳನ್ನು ಪರಿಶೀಲಿಸಿ, ಅರ್ಹರಿಗೆ ವೃದ್ಧಾಪ್ಯ ಹಾಗೂ ವಿಧವಾ ವೇತನ ಮರುಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

ಇದಲ್ಲದೆ, ಮಾಸಣಗಿ ಗ್ರಾಮ ಪಂಚಾಯಿತಿ ಕಾಗಿನೆಲೆ ಹೋಬಳಿಗೆ ಸೇರಿರುವುದರಿಂದ ಸಾರ್ವಜನಿಕರಿಗೆ ಆಡಳಿತಾತ್ಮಕ ಕೆಲಸಗಳಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಗ್ರಾಮ ಪಂಚಾಯಿತಿಯನ್ನು ಬ್ಯಾಡಗಿ ಹೋಬಳಿಗೆ ಸೇರ್ಪಡೆಗೊಳಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

40 ಅರ್ಜಿ ಬಾಕಿ : ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಒಟ್ಟು 46 ಅರ್ಜಿಗಳು ಸ್ವೀಕೃತಗೊಂಡವು. ಈ ಪೈಕಿ ತಾಲೂಕು ಪಂಚಾಯಿತಿಗೆ 24, ಹೆಸ್ಕಾಂಗೆ 7, ಕಂದಾಯ ಇಲಾಖೆಗೆ 10, ಶಿಶು ಅಭಿವೃದ್ಧಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 2, ಕೃಷಿ ಇಲಾಖೆಗೆ 1, ತೋಟಗಾರಿಕೆ ಇಲಾಖೆಗೆ 1 ಹಾಗೂ ನೀರಾವರಿ ಇಲಾಖೆಗೆ 1 ಅರ್ಜಿ ಸಲ್ಲಿಕೆಯಾಗಿವೆ. ಆರು ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲಾಗಿದ್ದು, ಉಳಿದ 40 ಅರ್ಜಿಗಳು ಬಾಕಿ ಉಳಿದಿವೆ.

ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ಮಹಿಳೆ ಅಬಲೆಯಲ್ಲ, ಸಬಲೆ : ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ

ಪಾಂಡವ ನ್ಯೂಸ್, ವಿಜಯನಗರ : ಮಹಿಳೆಯರು ಅಬಲೆಯರಲ್ಲ, ಸಬಲೆಯರು. ಪ್ರಸ್ತುತ ಸಮಾಜದಲ್ಲಿ ದೊರೆಯುತ್ತಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ಉನ್ನತ ಸ್ಥಾನಗಳನ್ನು ಅಲಂಕ–ರಿಸಬೇಕು. ಜೀವನದ ಪ್ರತಿಯೊಂದು ಹಂತದಲ್ಲೂ ಸವಾಲುಗಳು, ಅವಮಾನಗಳು ಎದುರಾಗುವುದು ಸಹಜ. ಆದರೆ ಅವುಗಳಿಗೆ ಎದೆಗುಂದದೆ, ಅವಮಾನಗಳನ್ನು ಮೆಟ್ಟಿನಿಂತು ಮುನ್ನಡೆಯುವಛಲ ಮಹಿಳೆಯರಲ್ಲಿ ಇರಬೇಕುಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿಕರೆ ನೀಡಿದರು.

ನಗರದ ವಿಜಯನಗರ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಿಜಯನಗರ ಮಹಾವಿದ್ಯಾಲಯ, ಮಹಿಳಾ ಸಬಲೀಕರಣ ಕೋಶ ಹಾಗೂ ಆಂತರಿಕ ದೂರು ಸಮಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಜಯನಗರ ಮಹಾವಿದ್ಯಾಲಯ ವಿದ್ಯಾರ್ಥಿನಿಯರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಹಿಳೆಯರು ಮತ್ತೊಬ್ಬರ ಮುಂದೆ ಕೈಚಾಚಿ ಬೇಡುವ ಸ್ಥಿತಿಯಲ್ಲಿ ಇರಬಾರದು. ಬದಲಾಗಿ, ಮತ್ತೊಬ್ಬರಿಗೆ ನೆರವಾಗುವಷ್ಟು ಸಾಮರ್ಥ್ಯ ಮತ್ತು ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರಜೀವನ ಸಾರ್ಥಕವಾಗುತ್ತದೆ. ಹಲವು ವರ್ಷಗಳಿಂದ ಮಹಿಳೆಯರನ್ನು ಮಕ್ಕಳನ್ನು ಹೆರುವ ಮತ್ತು ಕುಟುಂಬದ ಜವಾಬ್ದಾರಿ ನಿರ್ವಹಿಸುವ ವ್ಯಕ್ತಿಗಳಾಗಿ ಮಾತ್ರ ನೋಡುವ ಮನೋಭಾವ ಸಮಾಜದಲ್ಲಿತ್ತು. ಆದರೆ ಇಂದು ಕಾಲ ಬದಲಾಗಿದ್ದು, ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳಿವೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಸಮಾನತೆಯ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕುಎಂದರು.

ಪ್ರತಿಯೊಬ್ಬ ಮಹಿಳೆಯೂ ಉತ್ತಮ ಶಿಕ್ಷಣ ಪಡೆದು ಪ್ರಜ್ಞಾವಂತರಾಗಿಬೇಕು. ಉತ್ತಮ ಸ್ನೇಹಿತರನ್ನು ಸಂಪಾದಿಸಿಕೊಳ್ಳುವುದರ ಜೊತೆಗೆ, ಜೀವನದಲ್ಲಿ ಸಾಧನೆ ಮಾಡುವ ಗುರಿಯೊಂದಿಗೆ ನಿರಂತರ ಪ್ರಯತ್ನಿಸಬೇಕು. ಹೆಣ್ಣು ಮಕ್ಕಳು ಹುಟ್ಟಿರುವುದೇ ಜೀವನದಲ್ಲಿ ಏನಾದರೂ ಸಾಧಿಸಲು ಹೊರತು ಅಡುಗೆಮನೆಗೆ ಸೀಮಿತವಾಗಿರಲು ಅಲ್ಲ. ಮಹಿಳೆಯರ ಸಾಮರ್ಥ್ಯಕ್ಕೆತಕ್ಕ ಅವಕಾಶ ಮತ್ತು ಗೌರವ ದೊರೆತಾಗ ಮಾತ್ರ ಸಮಾಜದ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರೀತಿ–ಪ್ರೇಮದ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡುವುದು, ಬೆದರಿಕೆ ಹಾಕುವುದು ಅಥವಾ ಮಹಿಳೆಯರು ಯಾವುದೇ ರೀತಿಯ ಕಿರುಕುಳ ಹಾಗೂ ಶೋಷಣೆಗೆ ಒಳಗಾದಾಗ ಭಯಭೀತರಾಗದೆ ಧೈರ್ಯದಿಂದ ಎದುರಿಸಬೇಕು. ಇಂತಹ ಸಂದರ್ಭಗಳಲ್ಲಿ ಮೌನವಾಗಿರದೆ ಪೊಲೀಸ್ ಇಲಾಖೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿ ನ್ಯಾಯ ಪಡೆದುಕೊಳ್ಳಬೇಕು. ಅನ್ಯಾಯ ಮತ್ತುದೌರ್ಜನ್ಯದ ವಿರುದ್ಧ ಧ್ವನಿಯೆತ್ತುವುದೇ ಮಹಿಳೆಯರ ಮೊದಲ ಹೆಜ್ಜೆಯಾಗಬೇಕು ಎಂದು ಸಲಹೆ ನೀಡಲಾಯಿತು.

ಮಹಿಳಾ ಶಕ್ತಿಯ ಸಂಕಲ್ಪ : ಮಹಿಳೆಯರು ಯಾವುದೇ ರೀತಿಯ ಅನ್ಯಾಯ, ದೌರ್ಜನ್ಯ ಮತ್ತು ಶೋಷಣೆಯ ವಿರುದ್ಧಇನ್ನು ಮುಂದೆ ಮೌನವಾಗಿರದೆ ಧೈರ್ಯದಿಂದ ಧ್ವನಿಯೆತ್ತುವ ಸಂಕಲ್ಪ ಮಾಡಬೇಕು. ಮಹಿಳೆಯರ ಹಕ್ಕುಗಳು, ಸ್ವಾಭಿಮಾನ ಮತ್ತು ಸಮಾನತೆಗಾಗಿ ಪ್ರತಿಯೊಬ್ಬರೂ ಒಗ್ಗಟ್ಟಿ

ಪ್ರಮುಖ ಸಂಕ್ಷಿಪ್ತ ಸುದ್ದಿ

ಶಿಕ್ಷಣ, ಸಮಾಜ ಸೇವೆ ಗುರುತಿಸಿ ಉಪನ್ಯಾಸಕ ಶಿವಾನಂದಗೆ 'ಸದ್ಭಾವನಾ ಶಿಕ್ಷಕ ರತ್ನ' ಪ್ರಶಸ್ತಿ



ಪಾಂಡವ ನ್ಯೂಸ್, ರಾಣೆಬೆನ್ನೂರು: ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಯನ್ನು ಗುರುತಿಸಿ ನಗರದ ವಿದ್ಯಾನಗರ 10ನೇ ಕ್ರಾಸ್‌ನ ಡಾ. ಅಂಬೇಡ್ಕರ್ ಹೈಸ್ಕೂಲ್ ಹಿಂಭಾಗದ ಕಟ್ಟಿಮನಿ ಲೇಔಟ್ ನಿವಾಸಿ ಉಪನ್ಯಾಸಕ ಎಚ್. ಶಿವಾನಂದ ಅವರಿಗೆ ರಾಜ್ಯಮಟ್ಟದ 'ಸದ್ಭಾವನಾ ಶಿಕ್ಷಕ ರತ್ನ' ಪ್ರಶಸ್ತಿ ಲಭಿಸಿದೆ.

ಹಾವೇರಿಯ ಪರಿವರ್ತನಾ ಸೇವಾ ಸಂಸ್ಥೆ ವತಿಯಿಂದ ನ. 4ರಂದು ಬುಧವಾರ ನಗರದ ಡಾ. ಮಹಾದೇವ ಬಣಕಾರ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಿವಾನಂದ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಿ.ಎ.ಜೆ.ಎಸ್.ಎಸ್. ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಡಾ. ಆರ್.ಎಂ. ಕುಬೇರಪ್ಪ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಹಾದೇವಸ್ವಾಮಿ, ಮಾಜಿ ಜಿಲ್ಲಾ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಹಾಲಸಿದ್ದಪ್ಪ ಡಿ.ಆರ್., ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ವಿದ್ವಾಂಸ ಡಾ. ಕೆ.ಸಿ. ನಾಗರಾಜು ಹಾಗೂ ಪರಿವರ್ತನಾ ಸೇವಾ ಸಂಸ್ಥೆ ಅಧ್ಯಕ್ಷ ಗಣೇಶ ಗುಡಿಗ

ಮಲ್ಲಿಗೆ ಯೋಗ ಟ್ರಸ್ಟ್‌ನ ಎಂಟು ಸಾಧಕರಿಗೆ ರಾಷ್ಟ್ರೀಯ ಪ್ರಶಸ್ತಿ



ಪಾಂಡವ ನ್ಯೂಸ್, ಹೂವಿನಹಡಗಲಿ: ಇಲ್ಲಿನ ಮಲ್ಲಿಗೆ ಯೋಗ ಚಾರಿಟಬಲ್ ಟ್ರಸ್ಟ್‌ನ ಎಂಟು ಯೋಗ ಸಾಧಕರು ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಸಂಘಟನೆಯ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ್ ತಿಳಿಸಿದ್ದಾರೆ.

ನಿವೃತ್ತ ಶಿಕ್ಷಕರಾದ ಎ. ಅಶೋಕ ಮತ್ತು ಎಚ್.ಎಂ. ಶಿವಮೂರ್ತಿಯ್ಯ ಅವರಿಗೆ 'ಜೀವಮಾನ ಯೋಗ ಸಾಧಕ', ತನುಜಾ ಬಸವರಾಜ, ಕಮಲಾ ನಿಂಗಪ್ಪ ಹಾಗೂ ರಿಹಾನಾ ಪರ್ವೀನ್ ಅವರಿಗೆ 'ಯೋಗ ಜ್ಯೋತಿ', ಎಚ್. ಲೋಕೇಶ ತಿಪ್ಪಾಪುರ ಮತ್ತು ಈಟಿ ಹನುಮೇಶ ಅವರಿಗೆ 'ಯೋಗರತ್ನ', ಶಿಕ್ಷಕ ಬಸವರಾಜ ಮಾಗಳದ ಅವರಿಗೆ 'ಯೋಗಶ್ರೀ' ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನ ಪುರಭವನದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ರಾಜ್ಯ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಆರೋಗ್ಯ ಸಚಿವ ಯು.ಟಿ. ಖಾದರ್, ಹಿರಿಯ ಮುಖಂಡ ಬಸವರಾಜ ಪಾಟೀಲ ಸೇಡಂ, ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಸಂಸ್ಥಾಪಕ ಡಾ. ಯೋಗಿ ದೇವರಾಜ ಹಾಗೂ ಅಧ್ಯಕ್ಷ ಶರತ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.

ಮಲ್ಲಿಗೆ ಯೋಗ ಚಾರಿಟಬಲ್ ಟ್ರಸ್ಟ್ ಎರಡು ದಶಕಗಳಿಂದ ಉಚಿತ ಯೋಗ ತರಬೇತಿ, ಆರೋಗ್ಯ ಮತ್ತು ನೈರ್ಮಲ್ಯ ಜಾಗೃತಿ ಹಾಗೂ ನೈತಿಕ ಮೌಲ್ಯಗಳ ಅರಿವು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಟ್ರಸ್ಟ್‌ನ ಯೋಗ ಸಾಧಕರಿಗೆ ಪ್ರಶಸ್ತಿ ಲಭಿಸಿರುವುದು ಸಂತಸ ತಂದಿದೆ ಎಂದು ಕೊಟ್ರೇಶ್ ತಿಳಿಸಿದ್ದಾರೆ.

ಅಭಿನಂದನೆ: ಪ್ರಶಸ್ತಿ ಪುರಸ್ಕೃತರನ್ನು ಟ್ರಸ್ಟ್ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ್, ಸಂಚಾಲಕ ಗುರುರಾಜ ಹವಾಲ್ದಾರ್ ಸೇರಿದಂತೆ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ದೇಶಿ, ಸುಧಾರಿತ ಕೋಳಿಮರಿ ವಿತರಣೆಗಾಗಿ ಅರ್ಜಿ ಆಹ್ವಾನ

ಪಾಂಡವ ನ್ಯೂಸ್, ಧಾರವಾಡ : ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ ಬೆಂಗಳೂರು, ಪ್ರಾದೇಶಿಕ ಕೇಂದ್ರ ರಾಯಾಪುರ ಧಾರವಾಡ ವತಿಯಿಂದ ಕುಂದಗೋಳ ತಾಲ್ಲೂಕಿನಲ್ಲಿ 2026–27 ನೇ ಸಾಲಿನಲ್ಲಿ 05 ವಾರದ ದೇಶಿ, ಸುಧಾರಿತ ಕೋಳಿಮರಿಗಳನ್ನು ಮಹಾಮಂಡಳದ ಅನುದಾನದಲ್ಲಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ (ಶೇ.17), ಪರಿಶಿಷ್ಟ ಪಂಗಡ(ಶೇ.7),

ಹಿಂದುಳಿದ ವರ್ಗ (ಶೇ.32) ಹಾಗೂ ಸಾಮಾನ್ಯ ವರ್ಗದ(ಶೇ.44) ಒಟ್ಟು 99 ರೈತ ಮಹಿಳಾ ಫಲಾನುಭವಿಗಳಿಗೆ ಹಾಗೂ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಬೆಂಗಳೂರು ಇವರಿಂದ ಬಿಡುಗಡೆಯಾದ ಅನುದಾನದಿಂದ ಗ್ರಾಮೀಣ ಭಾಗದ ಬಂಜಾರ, ಲಂಬಾಣಿ, ಸುಕಾಲಿ, ಸುಗಾಲಿ ಜನಾಂಗದ ಒಟ್ಟು 93 ರೈತ ಮಹಿಳಾ ಫಲಾನುಭವಿಗಳಿಗೆ ತಲಾ 20 ರಂತೆ 5 ವಾರದ ಕೋಳಿಮರಿಗಳನ್ನು ಉಚಿತವಾಗಿ ವಿತರಿಸುವ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ.ಹೆಚ್ಚಿನ ಮಾಹಿತಿಗಾಗಿ ಕುಂದಗೋಳ ತಾಲ್ಲೂಕಿನ ಪಶು ಆಸ್ಪತ್ರೆ ಹಾಗೂ ಪಶುವೈದ್ಯಕೀಯ ಸಂಸ್ಥೆಗಳಿಗೆ ಭೇಟಿ ಮಾಡಿ ಅರ್ಜಿ ನಮೂನೆಗಳನ್ನು ಪಡೆದು ಭರ್ತಿ ಮಾಡಿ ನವೆಂಬರ್ 12, 2026 ರೊಳಗಾಗಿ ಕುಂದಗೋಳ ತಾಲ್ಲೂಕಿನ ಪಶು ಆಸ್ಪತ್ರೆ ಅಥವಾ ಪಶುವೈದ್ಯಕೀಯ ಸಂಸ್ಥೆಗಳಿಗೆ ಸಲ್ಲಿಸಬೇಕು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡಾಭಿಮಾನ ನಿತ್ಯ ಉಸಿರಾಗಲಿ

ಕನ್ನಡ ನಾಡು–ನುಡಿಗೆ ಸೇವೆ ಸಲ್ಲಿಸಿದ ಮಹನೀಯರ ಸ್ಮರಣೆ ಅಗತ್ಯ : ಅಂಚೆ ಅಧೀಕ್ಷಕ ಎಸ್.ಎಸ್. ಶಿರಹಟ್ಟಿ



ಪಾಂಡವ ನ್ಯೂಸ್, ಗದಗ : ಕನ್ನಡದ ಕಂಪು ನಾಡಿನ ಎಲ್ಲಡೆ ಪಸರಿಸಬೇಕು. ಕನ್ನಡ ಭಾಷೆ, ನೆಲ, ಜಲ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು ದಿನವೂ ನಡೆಯಬೇಕು ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕ ಎಸ್.ಎಸ್.ಶಿರಹಟ್ಟಿ ಅಭಿಪ್ರಾಯಪಟ್ಟರು.

ನಗರದ ಸ್ವತಂತ್ರ ವಿತರಣಾ ಕೇಂದ್ರದಲ್ಲಿ ಸೋಮವಾರ ಗದಗ ಮನರಂಜನಾ ಕೂಟ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಮತ್ತು ಸಂಗೀತ ಸ್ಪರ್ಧೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕನ್ನಡ ನಾಡು ಏಕೀಕರಣಕ್ಕೆ ಆಲೂರು ವೆಂಕಟರಾವ್, ಬಿ.ಎಂ.ಶ್ರೀ, ಕುವೆಂಪು ಮುಂತಾದ ಮಹನೀಯರ ತ್ಯಾಗ ಮತ್ತು ಪರಿಶ್ರಮ ಬಗೆಗೆ ಪ್ರತಿಯೊಬ್ಬ ಕನ್ನಡಿಗರಲ್ಲಿ ನಾಡು–ನುಡಿಯ ಬಗ್ಗೆ ಅಭಿಮಾನ, ಗೌರವ ಮತ್ತು ಜಾಗೃತಿ ಮೂಡಿಸುವ ಮೂಲಕ ರಾಜ್ಯೋತ್ಸವ ನಿಜವಾದ ಅರ್ಥದಲ್ಲಿ ಕನ್ನಡಮಯವಾಗಬೇಕು.

ರಾಜ್ಯೋತ್ಸವವು ಕೇವಲ ಸಂಭ್ರಮಾಚರಣೆಗೆ ಸೀಮಿತವಾಗದೆ, ಕನ್ನಡ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆ ಹಾಗೂ ನಾಡಿಗೆ ಅಪಾರ ಕೊಡುಗೆ ನೀಡಿದ ಮಹನೀಯರನ್ನು ಸ್ಮರಿಸುವ ಅರ್ಥಪೂರ್ಣ ದಿನವಾಗಬೇಕು ಎಂದರು.

ಕರ್ನಾಟಕ ಏಕೀಕರಣಕ್ಕೂ ಮುನ್ನ ಕನ್ನಡ ಭಾಷಿಕ ಪ್ರದೇಶಗಳು ಐದು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದವು. ಇಂತಹ ಸಂದರ್ಭದಲ್ಲಿ ಕನ್ನಡಿಗರ ಹೋರಾಟ, ತ್ಯಾಗ ಮತ್ತು ಪರಿಶ್ರಮದ ಫಲವಾಗಿ ಅಖಂಡ ಕರ್ನಾಟಕ ನಿರ್ಮಾಣವಾಗಿದೆ.

ಈ ಐತಿಹಾಸಿಕ ಹಿನ್ನೆಲೆಯನ್ನು ಇಂದಿನ ಯುವಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದರು.

ಕನ್ನಡ ನಾಡು ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನ, ಶಿಕ್ಷಣ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಅನನ್ಯ ಕೊಡುಗೆ ನೀಡಿದೆ. ದೇಶದ ಹಲವು ಕ್ಷೇತ್ರಗಳಲ್ಲಿ ಪ್ರಥಮ ಸಾಧನೆ ಮಾಡಿದ ಕನ್ನಡಿಗರ ಹೆಮ್ಮೆಯ ಸಾಧನೆಗಳನ್ನು ಗುರುತಿಸಿ ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಾಡಿನ ಏಳಿಗೆಗಾಗಿ ಶ್ರಮಿಸಿದ ಮಹನೀಯರ ಸ್ಮರಣೆ,

ಅವರ ಆದರ್ಶಗಳ ಪರಿಚಯ ಹಾಗೂ ಕನ್ನಡದ ಹಿರಿಮೆಯನ್ನು ಸಾರುವ ಕಾರ್ಯಕ್ರಮಗಳು ರಾಜ್ಯೋತ್ಸವದ ಅವಿಭಾಜ್ಯ ಅಂಗವಾಗಬೇಕು ಎಂದರು.

ಇದೇ ವೇಳೆ ಅಂಚೆ ಅಧೀಕ್ಷಕರು "ಕರುನಾಡು ತಾಯಿ ಸದಾ ಚಿನ್ಮಯಿ, ಈ ಪುಣ್ಯಭೂಮಿ ನಮ್ಮ ದೇವಾಲಯ" ಎಂಬ ಜನಪ್ರಿಯ ಚಿತ್ರಗೀತೆಯನ್ನು ಸುಮಧುರವಾಗಿ ಹಾಡುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು. ಅವರ ಗಾಯನಕ್ಕೆ ಸಭಿಕರಿಂದ ಮೆಚ್ಚುಗೆಯ ಕರತಾಡನ ವ್ಯಕ್ತವಾಯಿತು. ಈ ಮೂಲಕ ಅವರು ನೆರೆದಿದ್ದವರನ್ನು ರಂಜಿಸಿ, ಕಾರ್ಯಕ್ರಮದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಗದಗ ಉಪವಿಭಾಗದ ಸಹಾಯಕ ಅಂಚೆ ಅಧೀಕ್ಷಕ ವಿನೋಧಕುಮಾರ ಮೇದಾರ, ಐಪಿಪಿಬಿ ಮ್ಯಾನೇಜರ್ ಮಂಜುನಾಥ, ರೋಣ ಅಂಚೆ ನಿರೀಕ್ಷಕ ವೆಂಕಟೇಶರಡ್ಡಿ ಕೊಳ್ಳಿ, ಪ್ರಧಾನ ಅಂಚೆ ಪಾಲಕ ಏಕನಾಥ ಮೆಣನಸಿನಕಾಯಿ, ಸ್ವತಂತ್ರ ವಿತರಣಾ ಕೇಂದ್ರ ಮೇಲ್ವಿಚಾರಕ ಡಿ.ಜಿ.ಮ್ಯಾಗೇರಿ ಮಾತನಾಡಿದರು. ಶರಣಪ್ಪ ನಾಯ್ಕರ, ಸೌಮ್ಯ ಹುಯಿಲಗೋಳ , ವಿನೂತ ಕಪ್ಪತನವರ, ಕವಿತಾ ರಡ್ಡೇರ, ವೀರೇಶ ಅಂಗಡಿ, ಮೇಘನಾ ಕುಲಕರ್ಣಿ,

ವಾಣಿ ಯಳಗಂಟಿ, ಭೀಮಣ್ಣ ದೊಡ್ಡಮನಿ, ರವಿ ಜಾಧವ, ವೀರಣಗೌಡ ಸಂಗೀತ ಸ್ಪರ್ಧೆ ಪಾಲ್ಗೊಂಡು ಯಶಸ್ವಿಗೊಳಿಸಿದರು. ಇದೇ ವೇಳೆ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ವ್ಯಾಪಾರಿ ಗ್ರಾಹಕರಿಗಾಗಿ ಡಿಜಿಟಲ್ ಪಾವತಿಗಾಗಿ ಡಕ್ ಪೇ ಸೌಂಡ್ ಬಾಕ್ಸ್ ವಿತರಣೆ ಮಾಡಲಾಯಿತು.

ಪ್ರಧಾನ ಅಂಚೆ ಕಚೇರಿ ಹಾಗೂ ಐಡಿಸಿ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವೆಂಕಟೇಶ ಆಕಳವಾಡಿ ನಿರೂಪಿಸಿದರು, ಸೋಮು ಎಸ್ ಸ್ವಾಗತಿಸಿ, ವಂದಿಸಿದರು

ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ 1 ಲಕ್ಷ ಅನುದಾನ

ಪಾಂಡವ ನ್ಯೂಸ್, ರಾಣೇಬೆನ್ನೂರು: ತಾಲೂಕಿನ ಕುನಬೇವು ಪ್ಲಾಟ್ ಕಾರ್ಯಕ್ಷೇತ್ರದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ವತಿಯಿಂದ 1 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯರ ಆಶೀರ್ವಾದದೊಂದಿಗೆ ಮಂಜೂರಾದ ಅನುದಾನದ ಡಿ.ಡಿ.ಯನ್ನು ದೇವಸ್ಥಾನ ಸಮಿತಿ ಅಧ್ಯಕ್ಷ ಈರಣ್ಣ ಹಾಗೂ ಸದಸ್ಯರಿಗೆ ತಾಲೂಕು ಯೋಜನಾಧಿಕಾರಿ ಮಂಜುನಾಥ್ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಜುನಾಥ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಆರ್ಥಿಕ ಚಟುವಟಿಕೆಗಳ ಜತೆಗೆ ಗ್ರಾಮೀಣ ಪ್ರದೇಶಗಳ ಸಮಗ್ರ



ಅಭಿವೃದ್ಧಿ ಹಾಗೂ ಸಾಮಾಜಿಕ,

ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಪ್ರಗತಿಗೂ ಆದ್ಯತೆ ನೀಡುತ್ತಿದೆ. ದೇವಸ್ಥಾನಗಳು ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಧಾರ್ಮಿಕ ನಂಬಿಕೆಗಳ ಪ್ರತೀಕವಾಗಿದ್ದು, ಅವುಗಳ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಯೋಜನೆಯಿಂದ ಸಹಕಾರ ನೀಡಲಾಗುತ್ತಿದೆ ಎಂದರು.

ಮಂಜೂರಾದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಜೀರ್ಣೋದ್ಧಾರ ಕಾರ್ಯ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.ವಲಯ ಮೇಲ್ವಿಚಾರಕಿ ಕವಿತಾ, ಸೇವಾಪ್ರತಿನಿಧಿ ಉಷಾ, ಒಕ್ಕೂಟದ ಅಧ್ಯಕ್ಷೆ ಭವಾನಿ ಹಾಗೂ ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಭರತನಾಟ್ಯ ರಂಗಪ್ರವೇಶದಿಂದ ಸಾರ್ಥಕತೆಯ ಮನೋಭಾವ: ರಾಮಮೂರ್ತಿರಾವ್



ಪಾಂಡವ ನ್ಯೂಸ್, ಧಾರವಾಡ: ಭರತನಾಟ್ಯವು ಕೇವಲ ನೃತ್ಯ ಕಲೆಯಲ್ಲ. ದೈಹಿಕ ಕಸರತ್ತಿನ ಜತೆಗೆ ಮನಸ್ಸಿನ ಏಕಾಗ್ರತೆ, ಶಿಸ್ತು, ಸಂಯಮ ಹಾಗೂ ಸಂಸ್ಕಾರವನ್ನು ಬೆಳೆಸುವ ಶ್ರೇಷ್ಠ ಕಲೆಯಾಗಿದೆ ಎಂದು ಹಿರಿಯ ನೃತ್ಯ ನಿರ್ದೇಶಕ ಮೈಸೂರಿನ ರಾಮಮೂರ್ತಿರಾವ್ ಅಭಿಪ್ರಾಯಪಟ್ಟರು.

ಧಾರವಾಡದ ಉಪಾಧ್ಯಾಯ ನೃತ್ಯ ವಿಹಾರದ ಆಶ್ರಯದಲ್ಲಿ ನಗರದ ಜೆಎಸ್ಎಸ್ ಆವರಣದ ಸನ್ನಿಧಿ ಕಲಾ ಮಂದಿರದಲ್ಲಿ ಕುಮಾರಿ ಶ್ರೀರಕ್ಷಾ ಶ್ರೀನಿವಾಸ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವಜನರು ಸಾಂಸ್ಕೃತಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು. ಭರತನಾಟ್ಯ ಕಲಿಕೆ ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ಸಹಕಾರಿಯಾಗಿದೆ. ಗುರು–ಶಿಷ್ಯ ಪರಂಪರೆಯ ಮಹತ್ವವನ್ನು ಅರಿತು ಗುರುಗಳಿಗೆ ಗೌರವ ಸಲ್ಲಿಸುವ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು.

ಹಿರಿಯ ವಕೀಲ ವಿ.ಡಿ. ಕಾಮರೆಡ್ಡಿ ಮಾತನಾಡಿ, ನೃತ್ಯಕಲೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ. ಶಿಕ್ಷಣದ ಜತೆಗೆ ಕಲೆಯನ್ನೂ ಬೆಳೆಸಿಕೊಂಡರೆ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ಪಾಲಕರು ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಸೂಕ್ತ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ನ್ಯಾಯವಾದಿ ಅಲ್ಲಪ್ಪ ಬಡಿಗೇರ, ಪ್ರೊ. ಕೆ.ಪಿ. ಈರಣ್ಣ, ರವೀಂದ್ರನಾಥ ದೊಡ್ಡಮೇಟಿ, ವಿದುಷಿ ಪ್ರಮೋದಾ ಉಪಾಧ್ಯಾಯ, ವಿದುಷಿ ಶುಭಾರಾಣಿ ಬೋಳಾರ, ಉಷಾ ಶ್ರೀನಿವಾಸ ಹಾಗೂ ಐ.ಬಿ. ಶ್ರೀನಿವಾಸ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಡಾ. ಅಜಿತ್ ಪ್ರಸಾದ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಪ್ರಮೋದಾ ಉಪಾಧ್ಯಾಯ ಅವರಿಗೆ ಶ್ರೀರಕ್ಷಾ ಗುರು ವಂದನೆ ಸಲ್ಲಿಸಿದರು.

ನಂತರ ಶ್ರೀರಕ್ಷಾ ಅವರು ಪುಷ್ಪಾಂಜಲಿಯೊಂದಿಗೆ ನೃತ್ಯ ಪ್ರದರ್ಶನ ಆರಂಭಿಸಿದರು. ಅಲಾ–ರಿಪು, ಭರತನಾಟ್ಯದ ವಿವಿಧ ತಾಳ–ಲಯಗಳ ಸಮನ್ವಯದೊಂದಿಗೆ ಅಷ್ಟಲಕ್ಷ್ಮಿ, ವರ್ಣ, ಅಷ್ಟಪದಿ, ಆನಂದತಾಂಡವ ಹಾಗೂ ಕೃತಿ ಸೇರಿದಂತೆ ಹಲವು ನೃತ್ಯ ಪ್ರಕಾರಗಳನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿದರು. ವಿಶೇಷವಾಗಿ ತಿಲಾನಾದಲ್ಲಿ ಭರತನಾಟ್ಯದ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ನಟುವಾಂಗದಲ್ಲಿ ವಿದುಷಿ ಪ್ರಮೋದಾ ಉಪಾಧ್ಯಾಯ ಹಾಗೂ ವಿದುಷಿ ನವಮಿ ಮಹಾವೀರ ಸಹಕರಿಸಿದರು. ಗಾಯನದಲ್ಲಿ ಬೆಂಗಳೂರಿನ ರಘುರಾಮ್ ರಾಜಗೋಪಾಲನ್, ಮೃದಂಗ ಮತ್ತು ರಿದಂ ಪ್ಯಾಡ್‌ನಲ್ಲಿ ಪಂಚಮ ಉಪಾಧ್ಯಾಯ, ಪಿಟೀಲಿನಲ್ಲಿ ಪುಣೆಯ ಅಜಯ್ ಚಂದ್ರಮೌಳಿ ಹಾಗೂ ಕೊಳಲಿನಲ್ಲಿ ಬೆಂಗಳೂರಿನ ದೀಪಕ್ ಹೆಬ್ಬಾರ್ ಸಾಥ್ ನೀಡಿದರು. ಸಂತೋಷ ಮಹಾಲೆ ಅವರ ರಂಗಸಜ್ಜಿಕೆ ಮತ್ತು ರವಿ ಕುಲಕರ್ಣಿ ಅವರ ನಿರೂಪಣೆ ಕಾರ್ಯಕ್ರಮಕ್ಕೆ ಮೆರುಗು ನೀಡಿತು.

ಒಟ್ಟಾರೆ ಶ್ರೀರಕ್ಷಾ ಅವರ ರಂಗಪ್ರವೇಶ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಂಡಿತು. ನೃತ್ಯಗುರುಗಳಾದ ಪ್ರಮೋದಾ ಉಪಾಧ್ಯಾಯ ಹಾಗೂ ನವಮಿ ಅವರ ಪರಿಶ್ರಮ ಸಾರ್ಥಕವಾಯಿತು. ಪಾಲಕರಾದ ಉಷಾ ಶ್ರೀನಿವಾಸ ಮತ್ತು ಐ.ಬಿ. ಶ್ರೀನಿವಾಸ ತಮ್ಮ ಪುತ್ರಿಯ ಸಾಧನೆ ಕಂಡು ಸಂಭ್ರಮಿಸಿದರು.

ವಕೀಲರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಲು ಗದಗ ಜಿಲ್ಲಾ ವಕೀಲರ ಸಂಘದ ಆಗ್ರಹ

ಪಾಂಡವ ನ್ಯೂಸ್, ಗದಗ : ವಕೀಲರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಲ್ಲೆ ಹಾಗೂ ಅವಮಾನಕರ ಘಟನೆಗಳನ್ನು ತೀವ್ರವಾಗಿ ಖಂಡಿಸಿ, ವಕೀಲರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಗದಗ ಜಿಲ್ಲಾ ವಕೀಲರ ಸಂಘದ ವತಿಯಿಂದ ಜಿ

ಯಾರಿಗಾಗಿ ಈ ಬದುಕು... ಏತಕ್ಕಾಗಿ ಈ ಹೋರಾಟ... ಹುಚ್ಚು ಮನವೇ?

ತನ್ನನ್ನೇ ಸುಟ್ಟುಕೊಂಡು ಜಗತ್ತಿಗೆ ಬೆಳಕಾಗುವ ತಾಯಿಯ ತ್ಯಾಗಕ್ಕೆ ಬೆಲೆ ಕಟ್ಟಲು ಸಾಧ್ಯವೇ?

ಪ್ರತಿಯೊಬ್ಬರ ಬದುಕಿನಲ್ಲೂ ಒಂದಲ್ಲ ಒಂದು ದಿನ ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುವ ಕ್ಷಣ ಬಂದೇ ಬರುತ್ತದೆ. ಅಂದು ಮನಸ್ಸಿನೊಳಗೆ ಮೂಡುವ ಪ್ರಶ್ನೆ ಒಂದೇ... *ಯಾರಿಗಾಗಿ ಈ ಬದುಕು? ಏತಕ್ಕಾಗಿ ಈ ಹೋರಾಟ?*

ಜೀವನದುದ್ದಕ್ಕೂ ಸಂಸಾರವೆಂಬ ನೌಕೆಯನ್ನು ದಡ ಸೇರಿಸಲು ಹಗಲಿರುಳು ಶ್ರಮಿಸುವ ಅದೆಷ್ಟೋ ತಾಯಂದಿರು, ತಮ್ಮ ಆಸೆ-ಆಕಾಂಕ್ಷೆಗಳನ್ನು ಬದಿಗಿಟ್ಟು ಮಕ್ಕಳ ಭವಿಷ್ಯವನ್ನೇ ಬದುಕಿನ ಗುರಿಯಾಗಿಸಿಕೊಂಡಿರುತ್ತಾರೆ. ತಮ್ಮ ನೋವುಗಳನ್ನು ನುಂಗಿಕೊಂಡು, ಕಣ್ಣೀರನ್ನು ಕಣ್ಣಂಚಿನಲ್ಲೇ ಬಚ್ಚಿಟ್ಟುಕೊಂಡು, ಬದುಕಿನ ಪ್ರತಿಯೊಂದು ಸಂಕಷ್ಟವನ್ನೂ ಧೈರ್ಯದಿಂದ ಎದುರಿಸುತ್ತಾರೆ.

ತಾವು ಕಷ್ಟಪಟ್ಟರೂ ಪರವಾಗಿಲ್ಲ, ತಮ್ಮ ಮಕ್ಕಳು ಸುಖವಾಗಿರಬೇಕು. ತಾವು ಕತ್ತಲಲ್ಲಿದ್ದರೂ ಮಕ್ಕಳ ಬದುಕು ಬೆಳಕಾಗಬೇಕು. ತಾವು ಹಸಿದಿದ್ದರೂ ಮಕ್ಕಳ ಹೊಟ್ಟೆ ತುಂಬಬೇಕು. ಇದೇ ಅವರ ಬದುಕಿನ ಮಂತ್ರ.

ಆದರೆ, ತಾವು ನಂಬಿದವರಿಂದಲೇ ಅವಮಾನ, ನಿಂದನೆ, ನಿರ್ಲಕ್ಷ್ಯ ಎದುರಾದಾಗ? ತಮ್ಮ ಬದುಕನ್ನೇ ಮುಡಿಪಾಗಿಟ್ಟವರಿಂದ ನೋವು ಸಿಕ್ಕಾಗ? ಅದೆಲ್ಲವನ್ನೂ ಸಹಿಸಿಕೊಂಡು ಬಂದ ಮನಸ್ಸು ಒಂದು ದಿನ ಮೌನಕ್ಕೆ ಶರಣಾಗುತ್ತದೆ. ಆಗ ಅಂತರಂಗದಲ್ಲಿ ಮೊಳಗುವ ಪ್ರಶ್ನೆ... ಯಾರಿಗಾಗಿ ಈ ಬದುಕು? ಏತಕ್ಕಾಗಿ ಇಷ್ಟೊಂದು ಹೋರಾಟ?

ಕ್ಷಣಕಾಲ ಎಲ್ಲವೂ ಶೂನ್ಯವೆನಿಸುತ್ತದೆ. ಬದುಕಿನ ಮೇಲೆಯೇ ನಿರಾಸಕ್ತಿ ಮೂಡಿದಂತೆ ಭಾಸವಾಗುತ್ತದೆ. ಒಂಟಿತನವೇ ಸಂಗಾತಿಯಾಗಿ, ಮೌನವೇ ಭಾಷೆಯಾಗಿ ಬಿಡುತ್ತದೆ.

ಆದರೆ, ಅಷ್ಟರಲ್ಲೇ ಕಣ್ಣಮುಂದೆ ಮತ್ತೊಂದು ಚಿತ್ರಣ ಮೂಡುತ್ತದೆ. ಮಕ್ಕಳ ಮುಗ್ಧ ಮುಖಗಳು ನೆನಪಾಗುತ್ತವೆ. ಅವರ ಭವಿಷ್ಯದ ಕನಸುಗಳು ಕಣ್ಣೆದುರು ಬರುತ್ತವೆ.

ಮನಸ್ಸಿನ ಯಾವುದೋ ಮೂಲೆಯಲ್ಲಿ ಹೊಸ ಬೆಳಕೊಂದು ಮೂಡುತ್ತದೆ.

'ಅರೆ! ಹೌದಲ್ಲವೇ... ಈ ಬದುಕು ಮಕ್ಕಳಿಗಾಗಿ. ಅವರ ಭವಿಷ್ಯಕ್ಕಾಗಿ ಈ ಹೋರಾಟ. ಅವರ ನಾಳೆಗಳಿಗಾಗಿ ಇಂದಿನ ನನ್ನೆಲ್ಲ ನೋವುಗಳು.' ಮತ್ತೆ ಅದೇ ಮನಸ್ಸು ಗಟ್ಟಿಯಾಗುತ್ತದೆ. ಮತ್ತೆ ಬದುಕುವ ಛಲ ಮೂಡುತ್ತದೆ.

ಆದರೆ, ಆ ಬದುಕಿನ ಹಿಂದಿರುವ ತ್ಯಾಗ ಎಷ್ಟೊಂದು ಅಗಾಧವಾದದ್ದು! ಮಕ್ಕಳಿಗಾಗಿ ನಿದ್ದೆಯಿಲ್ಲದ ರಾತ್ರಿಗಳು, ಊಟವಿಲ್ಲದ ದಿನಗಳು, ಹೇಳಿಕೊಳ್ಳಲಾಗದ ಸಂಕಟಗಳು, ಯಾರಿಗೂ ಕಾಣದ ಕಣ್ಣೀರು... ಇವೆಲ್ಲವೂ ತಾಯಿಯ ಬದುಕಿನ ಅವಿಭಾಜ್ಯ ಅಂಗಗಳಾಗಿರುತ್ತವೆ. ತಾನು ಹರಕು ಮುರುಕು ಬಟ್ಟೆ ಧರಿಸಿದರೂ ಮಕ್ಕಳಿಗೆ ಉತ್ತಮ ಉಡುಪು ಕೊಡಿಸುತ್ತಾಳೆ. ತಾನು ಉಪವಾಸವಿದ್ದರೂ ಮಕ್ಕಳಿಗೆ ಹೊಟ್ಟೆತುಂಬ ಊಟ ಬಡಿಸುತ್ತಾಳೆ. ತನ್ನ ಆಸೆಗಳನ್ನು ಬಲಿಕೊಟ್ಟು ಮಕ್ಕಳ ಸಣ್ಣ ಸಣ್ಣ ಸಂತೋಷಗಳಲ್ಲೇ ತನ್ನ ಬದುಕಿನ ದೊಡ್ಡ ಸಂಭ್ರಮವನ್ನು ಕಂಡುಕೊಳ್ಳುತ್ತಾಳೆ.



ಮಕ್ಕಳ ಪ್ರತಿಯೊಂದು ಹೆಜ್ಜೆಯ ಹಿಂದೆಯೂ ಆಕೆಯ ಕಾಣದ ಕೈಗಳಿರುತ್ತವೆ. ಅವರ ಸೋಲಿನಲ್ಲಿ ಧೈರ್ಯ ತುಂಬುತ್ತಾಳೆ. ಗೆಲುವಿನಲ್ಲಿ ಸಂಭ್ರಮಿಸುತ್ತಾಳೆ. ಎಡವಿದಾಗ ಮೆಟ್ಟಿಲಾಗುತ್ತಾಳೆ. ಮುಗ್ಗರಿಸಿದಾಗ ಆಸರೆಯಾಗುತ್ತಾಳೆ. ಅವರ ಭವಿಷ್ಯವೆಂಬ ಕಟ್ಟಡಕ್ಕೆ ತನ್ನ ಬದುಕನ್ನೇ ಅಡಿಪಾಯವಾಗಿಸುತ್ತಾಳೆ.

ಆದರೆ, ಆ ಅಡಿಪಾಯದ ಮೇಲೆ ಅರಮನೆ ಕಟ್ಟಿಕೊಂಡವರು ಅದರ ಹಿಂದಿನ ಶ್ರಮವನ್ನು ನೆನಪಿಸಿಕೊಳ್ಳುತ್ತಾರೆಯೇ?

ತಾಯಿಯ ತ್ಯಾಗವನ್ನು ಅರಿಯಲು ಆಕೆಯ ಜಾಗದಲ್ಲಿ ನಿಂತು ಒಂದು ಕ್ಷಣ ಯೋಚಿಸಿದರೆ ಸಾಕು. ಆಕೆ ಅನುಭವಿಸಿದ ನೋವಿನ ಆಳ ಅರ್ಥವಾಗಬಹುದು. ಆಕೆಯ ಕಣ್ಣೀರಿನ ಹಿಂದಿನ ಕಾರಣ ತಿಳಿಯಬಹುದು.

ದುರಂತವೆಂದರೆ, ಕೆಲವೊಮ್ಮೆ ಆ ತ್ಯಾಗವೇ ಮಕ್ಕಳಿಗೆ ಸಹಜವೆನಿಸಿಬಿಡುತ್ತದೆ. ತಾಯಿ ಮಾಡಿದ್ದೆಲ್ಲ ಕರ್ತವ್ಯ, ಆಕೆ ಅನುಭವಿಸಿದ್ದೆಲ್ಲ ಆಕೆಯ ಹಣೆಬರಹ ಎಂಬ ನಿರ್ಲಕ್ಷ್ಯದ ಭಾವ ಮೂಡುತ್ತದೆ. ಆಕೆಯ ಅನುಭವಕ್ಕೆ ಬೆಲೆಯಿಲ್ಲ, ಆಕೆಯ ಮಾತಿಗೆ ಕಿವಿಯಿಲ್ಲ.

ಅನುಭವದ ಬೆಳಕಿನಲ್ಲಿ ತಾಯಿ ಹೇಳುವ ಕಾಳಜಿಯ ಮಾತುಗಳನ್ನೂ ಹಳೆಯ ಕಾಲದ ವಿಚಾರವೆಂದು ತಳ್ಳಿಹಾಕುವ ಮನೋಭಾವ ಬೆಳೆದುಬಿಡುತ್ತದೆ.

'ನನ್ನ ಅನುಭವವೇ ಹೆಚ್ಚು, ನನಗೆ ಎಲ್ಲವೂ ಗೊತ್ತು' ಎಂಬ ಅಹಂನ ಮುಂದೆ ಆಕೆಯ ಬದುಕಿನ ಅನುಭವಗಳೆಲ್ಲ ಮೌಲ್ಯ ಕಳೆದುಕೊಳ್ಳುತ್ತವೆ.

'ಅದು ನಿಮ್ಮ ಕರ್ಮ, ಅದರ ಗೊಡವೆ ನಮಗೇಕೆ?' ಎಂಬ ಒಂದೇ ಒಂದು ಮಾತು ಆಕೆಯ ಅಂತರಂಗವನ್ನು ಎಷ್ಟು ಆಳವಾಗಿ ಗಾಯಗೊಳಿಸಬಹುದು ಎಂಬುದನ್ನು ಹೇಳಲು ಸಾಧ್ಯವೇ?

ಆ ಕ್ಷಣದಲ್ಲಿ ಆಕೆ ವಾದಿಸುವುದಿಲ್ಲ. ತನ್ನ ತ್ಯಾಗದ ಲೆಕ್ಕ ಕೇಳುವುದಿಲ್ಲ. ತಾನು ಮಾಡಿದ ಉಪಕಾರಗಳನ್ನು ನೆನಪಿಸುವುದಿಲ್ಲ. ಸುಮ್ಮನೆ ಕಣ್ಣಂಚಿನಲ್ಲಿ ನೀರು ತುಂಬಿಕೊಳ್ಳುತ್ತದೆ. ಎಷ್ಟೋ ದಿನಗಳಿಂದ ಎದೆಯೊಳಗೆ ಕಟ್ಟಿಕೊಂಡಿದ್ದ ನೋವು ಹನಿಹನಿಯಾಗಿ ಕೆನ್ನೆಯ ಮೇಲೆ ಜಾರುತ್ತದೆ.

ಆ ಕಣ್ಣೀರಿಗೆ ಶಬ್ದವಿಲ್ಲ. ಆದರೆ ಅದರೊಳಗೆ ಸಾವಿರಾರು ಕಥೆಗಳಿರುತ್ತವೆ. ತಾನು ಕಳೆದ ನಿದ್ದೆಯಿಲ್ಲದ ರಾತ್ರಿಗಳು, ಬಿಟ್ಟುಕೊಟ್ಟ ಆಸೆಗಳು, ಅನುಭವಿಸಿದ ಅವಮಾನಗಳು, ಮಕ್ಕಳಿಗಾಗಿ ಕಂಡ ಕನಸುಗಳು ಎಲ್ಲವೂ ಆ ಒಂದೊಂದು ಹನಿಯಲ್ಲೂ ಅಡಗಿರುತ್ತವೆ.

ಒಂದು ಕ್ಷಣ ಆಕೆ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಾಳೆ...

ನಾನು ಉರಿದು ಬೆಳಕಾದದ್ದು ಯಾರಿಗಾಗಿ? ನನ್ನ ಕನಸುಗಳನ್ನು ಬಲಿಕೊಟ್ಟದ್ದು ಯಾರಿಗಾಗಿ? ನನ್ನ ಬದುಕಿನ ಪ್ರತಿಕ್ಷಣವನ್ನೂ ಮುಡಿಪಾಗಿಟ್ಟದ್ದು ಯಾರಿಗಾಗಿ?*

ಉತ್ತರ ಕಣ್ಣಮುಂದೆಯೇ ಇದ್ದರೂ ಮನಸ್ಸು ಅದನ್ನು ಒಪ್ಪಿಕೊಳ್ಳಲು ಸಿದ್ಧವಿರುವುದಿಲ್ಲ.

ಹೌದು, ತಾಯಿ ಎಂಬುದು ಕೇವಲ ಒಂದು ಸಂಬಂಧವಲ್ಲ. ಅದು ನಿಸ್ವಾರ್ಥ ಪ್ರೀತಿಯ ಸಂಕೇತ. ತನ್ನನ್ನೇ ಸುಟ್ಟುಕೊಂಡು ಇತರರಿಗೆ ಬೆಳಕಾಗುವ ಜ್ಯೋತಿ. ಆದರೆ ಆ ಜ್ಯೋತಿಯೂ ಒಂದು ದಿನ ದಣಿಯುತ್ತದೆ. ಆ ಬೆಳಕಿಗೂ ಒಂದಿಷ್ಟು ಪ್ರೀತಿ, ಗೌರವ, ಆತ್ಮೀಯತೆಯ ಅಗತ್ಯವಿರುತ್ತದೆ.

ಮಕ್ಕಳೇ, ಒಂದು ಕ್ಷಣ ಯೋಚಿಸಿ ನೋಡಿ. ನಿಮ್ಮ ಬದುಕಿನ ಪ್ರತಿಯೊಂದು ಬೆಳಕಿನ ಹಿಂದೆಯೂ ಯಾರದೋ ಕತ್ತಲಿನ ಹೋರಾಟವಿದೆ. ನಿಮ್ಮ ಪ್ರತಿಯೊಂದು ನಗುವಿನ ಹಿಂದೆಯೂ ಯಾರದೋ ಮೌನದ ಕಣ್ಣೀರು ಇದೆ. ನಿಮ್ಮ ಸಾಧನೆಯ ಹಿಂದೆಯೂ ಯಾರೋ ತಮ್ಮ ಕನಸುಗಳನ್ನು ಬದಿಗಿಟ್ಟು ನಿಂತಿದ್ದಾರೆ.

ಅವರಿಂದ ನಿಮಗೆ ಬೇಕಾಗಿರುವುದು ದೊಡ್ಡ ಸಂಪತ್ತಲ್ಲ, ಪ್ರತಿಫಲವೂ ಅಲ್ಲ. ಒಂದಿಷ್ಟು ಪ್ರೀತಿ, ಗೌರವ, ನಾಲ್ಕು ಆತ್ಮೀಯ ಮಾತುಗಳು ಮತ್ತು ನಿಮ್ಮ ಬದುಕಿನಲ್ಲಿ ಅವರಿಗೂ ಒಂದು ಸ್ಥಾನವಿದೆ ಎಂಬ ಭರವಸೆ ಮಾತ್ರ.

ಯಾಕೆಂದರೆ, ತಾಯಿಯ ತ್ಯಾಗಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆದರೆ ಆಕೆಯ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ಮಾತ್ರ ನಮ್ಮ ಕೈಯಲ್ಲಿದೆ.

ಕೊನೆಗೆ ಮತ್ತೆ ಅದೇ ಪ್ರಶ್ನೆ ಮನದ ಬಾಗಿಲು ತಟ್ಟುತ್ತದೆ...

ಯಾರಿಗಾಗಿ ಈ ಬದುಕು? ಏತಕ್ಕಾಗಿ ಈ ಹೋರಾಟ? : ಉತ್ತರ ಮಾತ್ರ ಒಂದೇ... ಪ್ರೀತಿಸಿದವರಿಗಾಗಿ, ನಂಬಿದವರಿಗಾಗಿ, ಮಕ್ಕಳ ಭವಿಷ್ಯಕ್ಕಾಗಿ.

ಆದರೆ, ಓ ಮನವೇ... ಬೆಳಕಾಗುವ ಭರದಲ್ಲಿ ನಿನ್ನನ್ನೇ ನೀನು ಕಳೆದುಕೊಳ್ಳಬೇಡ. ನಿನ್ನ ಬದುಕಿಗೂ ಒಂದು ಅರ್ಥವಿದೆ. ನಿನ್ನ ಕನಸುಗಳಿಗೂ ಒಂದು ಬೆಲೆಯಿದೆ. ನಿನ್ನ ಕಣ್ಣೀರು ಒರೆಸುವವರೂ ನಿನಗೆ ಬೇಕು.

ಏಕೆಂದರೆ, ಎಲ್ಲರ ಬದುಕಿಗೆ ಬೆಳಕಾಗುವ ಜ್ಯೋತಿಗೂ ಒಂದಿಷ್ಟು ಬೆಳಕಿನ ಅಗತ್ಯವಿದೆ.

ತನ್ನ ಬದುಕನ್ನೇ ಬೇರೆಯವರಿಗಾಗಿ ಮುಡಿಪಾಗಿಟ್ಟ ಆ ಜೀವಕ್ಕೆ ಕೊನೆಗಾದರೂ ಒಂದು ಪ್ರಶ್ನೆ ಉಳಿಯದಿರಲಿ... ಯಾರಿಗಾಗಿ ಈ ಬದುಕು?*

ಓ ಮನವೇ, ನಿನ್ನ ಮೌನಕ್ಕೂ ಒಂದು ಅರ್ಥವಿದೆ... ನಿನ್ನ ಕಣ್ಣೀರುಗೂ ಒಂದು ಕಥೆಯಿದೆ...

ರಿಜ್ಜು. ಎಲ್

ಅರ್ಜಿ ಆಹ್ವಾನ

ಪಾಂಡವ ನ್ಯೂಸ್, ಚಿತ್ರದುರ್ಗ : ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರತಿ ಭೇಟಿ ಗೌರವಧನದ ಆಧಾರದ ಮೇಲೆ ಅತಿ ವಿಶೇಷಜ್ಞ ವೈದ್ಯ ಸಲಹೆಗಾರರ ಹುದ್ದೆಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು, ಮಂಗಳೂರು ಸೇರಿದಂತೆ ನೆರೆಯ ಜಿಲ್ಲೆಗಳನ್ನು ಅವಲಂಬಿಸುವುದನ್ನು ತಪ್ಪಿಸಲು ಹಾಗೂ ರೋಗಿಗಳಿಗೆ ಉಂಟಾಗುವ ಭಾರಿ ಆರ್ಥಿಕ ಹೊರೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಅತಿ ವಿಶೇಷಜ್ಞ ವೈದ್ಯರನ್ನು ನೇಮಕ ಮಾಡಿಕೊಳ್ಳಲು, ಸಂಸ್ಥೆಯ 5ನೇ ಹಣಕಾಸು ಸಮಿತಿ ಸಭೆಯ ನಡವಳಿಗಳಲ್ಲಿ ಅನುಮೋದನೆ ನೀಡಲಾಗಿದೆ.ಭೇಟಿ ಅಥವಾ ಸಮಾಲೋಚನೆ ಆಧಾರದಲ್ಲಿ ಹೃದ್ರೋಗ ತಜ್ಞರು (Cardiologist), ನರವಿಜ್ಞಾನಿ (Neurologist), ನರಶಸ್ತ್ರಚಿಕಿತ್ಸಕ (Neurosurgeon), ಮೂತ್ರ ಪಿಂಡಶಾಸ್ತ್ರಜ್ಞ (Nephrologist), ನವಜಾತ ಶಿಶು ತಜ್ಞರು (Neonatologist) ಕ್ಯಾನ್ಸರ್ ತಜ್ಞರು (Oncologist), ಕ್ಯಾನ್ಸರ್ ಶಸ್ತ್ರಚಿಕಿತ್ಸಕರು (Surgical Oncologist), ಮನೋವೈದ್ಯರು (Psychiatrist) ಗಳನ್ನು ನೇಮಕ ಮಾಡಿಕೊಳ್ಳಲಾಗುವುದು.

ಪ್ರತಿದಿನದ ಭೇಟಿಗೆ ರೂ. 10,000 ಗೌರವಧನ ನೀಡಲಾಗುವುದು. ತಿಂಗಳಿಗೆ ಕನಿಷ್ಠ 4 ಭೇಟಿಗಳು ಕಡ್ಡಾಯವಾಗಿದೆ. ಸಾಂಸ್ಥಿಕ ನಿಯಮಗಳ ಪ್ರಕಾರ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಧನ ನೀಡಲಾಗುವುದು. ಮೊದಲ ಬಂದವರಿಗೆ ಮೊದಲ ಆದ್ಯತೆ ಮೇಲೆ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.ಆಸಕ್ತ ಹಾಗೂ ಅರ್ಹ ವೈದ್ಯಕೀಯ ತಜ್ಞರು ತಮ್ಮ ವಿವರವಾದ ಬಯೋಡಾಟಾ ವಿದ್ಯಾರ್ಹತೆ ಮತ್ತು ಅನುಭವದ ಪ್ರಮಾಣಪತ್ರಗಳೊಂದಿಗೆ ಇಮೇಲ್ ವಿಳಾಸ deancmcri@gmail.com ºÁUÀÆ ms.cmcri@gmail.com ಅರ್ಜಿಕಳುಹಿಸಬಹುದು. ರೋಗಿ-ಕೇಂದ್ರಿತ ಆರೋಗ್ಯ ಸೇವೆಯನ್ನು ಸುಧಾರಿಸುವ ಹಾಗೂ ಸಾರ್ವಜನಿಕರಿಗೆ ಸ್ಥಳೀಯವಾಗಿಯೇ ಅತ್ಯುತ್ತಮ ಚಿಕಿತ್ಸೆ ಕಲ್ಪಿಸುವ ಉದ್ದೇಶದಿಂದ ಈ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ ಎಂದು ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಬಿ.ವೈ. ಯುವರಾಜ್ ತಿಳಿಸಿದ್ದಾರೆ.

ನ.6 ರಂದು ಲೋಕಾಯುಕ್ತರ ಜಿಲ್ಲಾ ಪ್ರವಾಸ

ಪಾಂಡವ ನ್ಯೂಸ್,ವಿಜಯನಗರ (ಹೊಸಪೇಟೆ) : ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ನವೆಂಬರ್ 6 ರಂದು ಮಧ್ಯಾಹ್ನ 1.30ಕ್ಕೆ ಹೊಸಪೇಟೆಗೆ ಆಗಮಿಸುವರು. ಅಂದು ಸಂಜೆ 4.30ಕ್ಕೆ ಹೊಸಪೇಟೆಯ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ವಿವಿಧ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಭೆಯ ನಂತರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು.

ರಾತ್ರಿ ವೈಕುಂಠ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡುವರು. ನವೆಂಬರ್ 7ರಂದು ಬೆಳಿಗ್ಗೆ 9.45ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ನ.06 ರಂದು ಡಾಕ್ ಅದಾಲತ್ ಆಯೋಜನೆ

ಪಾಂಡವ ನ್ಯೂಸ್, ಧಾರವಾಡ : ಧಾರವಾಡ ಅಂಚೆ ವಿಭಾಗದ ವಿಭಾಗೀಯ ಮಟ್ಟದ ನವೆಂಬರ್-2026 ತಿಂಗಳಿನ ಡಾಕ್ ಅದಾಲತ್‌ನ್ನು ಧಾರವಾಡ ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ನವೆಂಬರ್ 06, 2026 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಆಯೋಜಿಸಲಾಗಿದೆ.

ಅಂಚೆ ಸೇವೆಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ದೂರುಗಳು, ವಿಶೇಷವಾಗಿ ಅಂಚೆ, ಸ್ಪೀಡ್ ಪೋಸ್ಟ್, ಪಾರ್ಸೆಲ್, ಕೌಂಟರ್ ಸೇವೆಗಳು, ಉಳಿತಾಯ ಬ್ಯಾಂಕ್, ಮನಿ ಆರ್ಡರ್ ಹಾಗೂ ದುರುಪಯೋಗ/ದುರ್ಬಳಕೆಗೆ ಸಂಬಂಧಿಸಿದ ದೂರುಗಳನ್ನು ಡಾಕ್ ಅದಾಲತ್‌ನಲ್ಲಿ ಪರಿಗಣಿಸಲಾಗುವುದು. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಅಂಚೆ ಮೂಲಕ, ಖುದ್ದಾಗಿ ಅಥವಾ ಇ-ಮೇಲ್ ಮೂಲಕ ನವೆಂಬರ್ 04, 2026 ರೊಳಗಾಗಿ ಸಲ್ಲಿಸಬಹುದು. ಸಾರ್ವಜನಿಕ ಅನುಕೂಲಕ್ಕಾಗಿ ಡಾಕ್ ಅದಾಲತ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸುವ ಸೌಲಭ್ಯವೂ ಲಭ್ಯವಿದ್ದು, ಸಾರ್ವಜನಿಕರು ತಮ್ಮ ಸಮೀಪದ ಪ್ರಧಾನ ಅಂಚೆ ಕಚೇರಿಯಿಂದ ವಿಸಿ ಮೂಲಕ ಡಾಕ್ ಅದಾಲತ್‌ನಲ್ಲಿ ಭಾಗವಹಿಸಬಹುದಾಗಿದೆ. ಡಾಕ್ ಅದಾಲತ್‌ಗೆ ಹಾಜರಾಗುವವರಿಗೆ ಯಾವುದೇ ಪ್ರಯಾಣ ಭತ್ಯೆ/ದಿನಭತ್ಯೆ ನೀಡಲಾಗುವುದಿಲ್ಲ ಎಂದು ಪ್ರಕಟಣೆ ನೀಡಿದೆ.


ದೀಪಾವಳಿ ಹಬ್ಬದ ಪ್ರ0ಯುಕ್ತ 340 ಹೆಚ್ಚುವರಿ ವಿಶೇಷ ಬಸ್‌ಗಳ ಸಂಚಾರ

ಪಾಂಡವ ನ್ಯೂಸ್, ಗದಗ : 2026 ನೇ ಸಾಲಿನ ದೀಪಾವಳಿ ಹಬ್ಬದ ಪ್ರ0ಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ವಾ0ಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ0ಯು ವಿವಿಧ ವಿಭಾಗಗಳಿಂದ ಸುಮಾರು 340 ಹೆಚ್ಚುವರಿ ವಿಶೇಷ ಬಸ್‌ಗಳನ್ನು ಕಾರ್0ಯಾಚರಣೆಗೊಳಿಸಲು ನಿರ್ಧರಿಸಿದೆ.ನವಂಬರ್ 09 ಸೋಮವಾರ ರಂದು ಅಮವಾಸ್ಯೆ ಹಾಗೂ ನವಂಬರ್ 10 ರಂದು ಮಂಗಳವಾರ ಬಲಿಪಾಡ್ಯಮಿ ಹಬ್ಬ ಇರುವ ಹಿನ್ನೆಲೆ0ಯಲ್ಲಿ, ಬೆಂಗಳೂರು ಸೇರಿದಂತೆ ಇತರ ಪ್ರಮುಖ ಸ್ಥಳಗಳಿಂದ ಪ್ರ0ಯಾಣಿಕರು ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.ಸಂಸ್ಥೆ0ಯ ವ್ಯಾಪ್ತಿ0ಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಹಾಗೂ ಬಾಗಲಕೋಟೆ ವಿಭಾಗಗಳಿಂದ ಹಾಗೂ ಬಸವೇಶ್ವರ ನಗರ ಟಿಟಿಎಂಸಿ ಬಸ್ ನಿಲ್ದಾಣಗಳಿಂದ ಸಂಸ್ಥೆ0ಯ ವ್ಯಾಪ್ತಿ0ಯ ವಿವಿಧ ಸ್ಥಳಗಳಿಗೆ ತೆರಳಲು ನವಂಬರ್ 06 ಶುಕ್ರವಾರದಿಂದ ನವಂಬರ್ 08 ರ ರವಿವಾರದವರೆಗೆ ಹೆಚ್ಚುವರಿ ವಿಶೇಷ ಬಸ್‌ಗಳ ಸೌಲಭ್ಯ ಕಲ್ಪಿಸಲಾಗಿದೆ.ಪ್ರ0ಯಾಣಿಕರು ಈ ವಿಶೇಷ ಸಾರಿಗೆ ಸೌಲಭ್ಯದ ಸದುಪ0ಯೋಗ ಪಡೆದುಕೊಂಡು, ಸಂಸ್ಥೆ0ಯ ಬಸ್‌ಗಳಲ್ಲಿ ಸುಖಕರ ಹಾಗೂ ಸುರಕ್ಷಿತ ಪ್ರ0ಯಾಣ ಕೈಗೊಳ್ಳುವಂತೆ ವಾ0ಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ನ.6ರಂದು ಜಿಲ್ಲಾ ಮಟ್ಟದ ಯುವ ಸಂಸತ್ತು ಸಭೆ

ಪಾಂಡವ ನ್ಯೂಸ್, ಗದಗ : ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ ಇವರುಗಳ ಸಹಯೋಗದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-2026ರ ಅಂಗವಾಗಿ ಜಿಲ್ಲಾ ಮಟ್ಟದ ಯುವ ಸಂಸತ್ತು ಸಭೆಯನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ನವೆಂಬರ್ 6ರಂದು ಬೆಳಿಗ್ಗೆ 10 ಗಂಟೆಗೆ ಹಮ್

ಉತ್ತರ ಕರ್ನಾಟಕದ ಬರಕ್ಕೆ ಶಾಶ್ವತ ಪರಿಹಾರವಾಗಲಿ ವರದಾ–ಬೆಡ್ತಿ ನದಿ ಜೋಡಣೆ





ಉತ್ತರ ಕರ್ನಾಟಕದ ಜನರ ದಶಕಗಳ ನೀರಿನ ಸಂಕಷ್ಟಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾದರೆ ವರದಾ–ಬೆಡ್ತಿ ನದಿ ಜೋಡಣೆ ಯೋಜನೆಯನ್ನು ವಿಳಂಬವಿಲ್ಲದೆ ಕಾರ್ಯರೂಪಕ್ಕೆ ತರುವುದು ಅತ್ಯಂತ ಅಗತ್ಯವಾಗಿದೆ. ವಿಶೇಷವಾಗಿ ಗದಗ ಜಿಲ್ಲೆಯ ರೈತರು, ಕೃಷಿ ಕಾರ್ಮಿಕರು, ಗ್ರಾಮೀಣ ಜನರು ಮತ್ತು ಕುಡಿಯುವ ನೀರಿಗಾಗಿ ಪರದಾಡುವ ಸಾರ್ವಜನಿಕರ ಪಾಲಿಗೆ ಈ ಯೋಜನೆ ಆಶಾದಾಯಕವಾಗಿದೆ.

ಪ್ರಕೃತಿಯು ಕರ್ನಾಟಕಕ್ಕೆ ಪಶ್ಚಿಮ ಘಟ್ಟಗಳ ಮೂಲಕ ಅಪಾರ ಜಲಸಂಪತ್ತನ್ನು ನೀಡಿದೆ. ಆದರೆ ಒಂದು ಭಾಗದಲ್ಲಿ ಮಳೆಗಾಲದಲ್ಲಿ ಹೆಚ್ಚಿನ ನೀರು ಸಮುದ್ರ ಸೇರುತ್ತಿದ್ದರೆ, ಇನ್ನೊಂದು ಭಾಗದಲ್ಲಿ ಮಳೆ ಕೊರತೆಯಿಂದ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತಿದೆ. ಈ ಅಸಮತೋಲನವನ್ನು ವೈಜ್ಞಾನಿಕ ಜಲ ನಿರ್ವಹಣೆ, ಪರಿಸರ ಸಂರಕ್ಷಣೆ ಮತ್ತು ಸಮರ್ಪಕ ಯೋಜನೆಯ ಮೂಲಕ ಸರಿಪಡಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಗದಗ ಜಿಲ್ಲೆಯಲ್ಲಿ ಮಳೆ ಅನಿಶ್ಚಿತತೆ, ಬರಗಾಲ, ಅಂತರ್ಜಲ ಕುಸಿತ, ಕೊಳವೆಬಾವಿಗಳಲ್ಲಿ ನೀರಿನ ಕೊರತೆ ಹಾಗೂ ಕೃಷಿ ಉತ್ಪಾದನೆಯಲ್ಲಿನ ಏರಿಳಿತಗಳು ರೈತರ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿವೆ. ಇಂತಹ ಸಂದರ್ಭದಲ್ಲಿ ವರದಾ ನದಿಯ ಮೂಲಕ ಬೆಡ್ತಿ ಜಲಾನಯನ ಪ್ರದೇಶದ ಹೆಚ್ಚುವರಿ ನೀರನ್ನು ಪೂರ್ವ ಭಾಗದ ನೀರಿನ ಕೊರತೆಯ ಪ್ರದೇಶಗಳಿಗೆ ವರ್ಗಾಯಿಸುವ ಯೋಜನೆ ಮಹತ್ವ ಪಡೆದುಕೊಳ್ಳುತ್ತದೆ.

ಗದಗ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳ ಕೃಷಿ ಮಳೆಯನ್ನೇ ಅವಲಂಬಿಸಿದೆ. ಮಳೆ ಕೊರತೆಯಾದಾಗ ಬೆಳೆಗಳು ಹಾನಿಗೊಳಗಾಗುವುದರ ಜೊತೆಗೆ ಕುಡಿಯುವ ನೀರು, ಜಾನುವಾರುಗಳ ನೀರಿನ ಅಗತ್ಯ ಮತ್ತು ಅಂತರ್ಜಲ ಮರುಪೂರಣದ ಸಮಸ್ಯೆಯೂ ತೀವ್ರವಾಗುತ್ತದೆ. ಈ ಹಿನ್ನೆಲೆಯಲ್ಲಿ ವರದಾ–ಬೆಡ್ತಿ ಯೋಜನೆಯ ನೀರನ್ನು ಸೂಕ್ತ ಜಲಾಶಯಗಳು, ಕಾಲುವೆಗಳು ಮತ್ತು ಎತ್ತುವ ನೀರಾವರಿ ವ್ಯವಸ್ಥೆಗಳ ಮೂಲಕ ಜಿಲ್ಲೆಯ ನೀರಿನ ಕೊರತೆಯ ಪ್ರದೇಶಗಳಿಗೆ ತಲುಪಿಸಬೇಕಾಗಿದೆ.

ಯೋಜನೆಯ ತಾಂತ್ರಿಕ ಹಿನ್ನೆಲೆ: ಭಾರತ ಸರ್ಕಾರದ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ (ಓಘಆಂ) ಕರ್ನಾಟಕದ ಬೆಡ್ತಿ–ವರದಾ ನದಿ ಜೋಡಣೆ ಯೋಜನೆಯ ಕು–ರಿತು ಅಧ್ಯಯನ ನಡೆಸಿದೆ. ರಾಷ್ಟ್ರೀಯ ನದಿ ಜೋಡಣೆ ಯೋಜನೆಗಳ ಪಟ್ಟಿಯಲ್ಲಿಯೂ ಈ ಯೋಜನೆ ಸ್ಥಾನ ಪಡೆದಿದೆ.

ಕೇಂದ್ರ ಜಲಶಕ್ತಿ ಸಚಿವಾಲಯವು 2026ರ ಫೆಬ್ರವರಿ 5ರಂದು ಬಿಡುಗಡೆ ಮಾಡಿದ ಅಧಿಕೃತ ಮಾಹಿತಿಯ ಪ್ರಕಾರ, ಬೆಡ್ತಿವರದಾ ಯೋಜನೆಯ ವಿವರವಾದ ಯೋಜನಾ ವರದಿ (ಆಕಖ) 2022ರ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಂಡಿದೆ. ಪರ್ಯಾಯ ಮಾರ್ಗದ ಪೂರ್ವ ಕಾರ್ಯಸಾಧ್ಯತಾ ವರದಿ (ಕಈಖ) ಅನ್ನು 2025ರ ಆಗಸ್ಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಹಿಂದಿನ ತಾಂತ್ರಿಕ ಪ್ರಸ್ತಾವನೆಗಳಲ್ಲಿ ಬೆಡ್ತಿ ಜಲಾನಯನ ಪ್ರದೇಶದಿಂದ ಸುಮಾರು 242 ಮಿಲಿಯನ್ ಘನ ಮೀಟರ್ ನೀರನ್ನು ವರದಾ ನದಿಗೆ ವರ್ಗಾಯಿಸುವ ಪರಿಕಲ್ಪನೆ ಪ್ರಸ್ತಾಪವಾಗಿತ್ತು. ಮತ್ತೊಂದು ಬೆಡ್ತಿ–ಧರ್ಮಾ–ವರದಾ ಪರ್ಯಾಯ ಪ್ರಸ್ತಾವನೆಯಲ್ಲಿ ಸುಮಾರು 551 ಮಿಲಿಯನ್ ಘನ ಮೀಟರ್ ನೀರನ್ನು ಎತ್ತಿ ಧರ್ಮಾ ಜಲಾಶಯಕ್ಕೆ ತಲುಪಿಸುವ ಯೋಜನೆಯನ್ನೂ ಓಘಆಂ ಅಧ್ಯಯನ ಮಾಡಿತ್ತು. ಧರ್ಮಾ ಜಲಾಶಯದಿಂದ ಹಾವೇರಿ ಮತ್ತು ಗದಗ ಜಿಲ್ಲೆಗಳ ನೀರಾವರಿಗೆ ನೀರು ಒದಗಿಸುವ ಉದ್ದೇಶವಿತ್ತು.

2025ರ ಆಗಸ್ಟ್‌ನಲ್ಲಿ ಪ್ರಕಟವಾದ ವರದಿಯ ಪ್ರಕಾರ, ಪರಿಷ್ಕೃತ ವಿನ್ಯಾಸದಲ್ಲಿ ಒಟ್ಟು ಸುಮಾರು 18.4 ಟಿಎಂಸಿ ನೀರನ್ನು ಎರಡು ಮಾರ್ಗಗಳ ಮೂಲಕ ವರ್ಗಾಯಿಸುವ ಪ್ರಸ್ತಾವನೆ ಚರ್ಚೆಯಲ್ಲಿತ್ತು. ಇದರಲ್ಲಿ ಒಂದು ಮಾರ್ಗಕ್ಕೆ 10.6 ಟಿಎಂಸಿ ಹಾಗೂ ಇನ್ನೊಂದು ಮಾರ್ಗಕ್ಕೆ 7.6 ಟಿಎಂಸಿ ನೀರಿನ ಅಂದಾಜು ಉಲ್ಲೇಖಿಸಲಾಗಿದೆ.

ಈ ತಾಂತ್ರಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಅಂತಿಮ ಆಕಖ, ನೀರಿನ ಲಭ್ಯತೆ, ಪಂಪಿಂಗ್ ಸಾಮರ್ಥ್ಯ, ಜಲಾಶಯಗಳ ಸಂಗ್ರಹ ಸಾಮಥ್ರ್ಯ, ಕಾಲುವೆಗಳ ಉದ್ದ, ವಿದ್ಯುತ್ ವೆಚ್ಚ ಹಾಗೂ ನೀರಿನ ಹಂಚಿಕೆಯ ವಿವರಗಳನ್ನು ಸಾರ್ವಜನಿಕರಿಗೆ ಪ್ರಕಟಿಸಬೇಕು.

ಗದಗ ಜಿಲ್ಲೆಯ ತಾಲೂಕುಗಳಿಗೆ ಆಗುವ ಪ್ರಮುಖ ಲಾಭಗಳು:

ಈ ಯೋಜನೆಯಿಂದ ಗದಗ ಜಿಲ್ಲೆಯ ಪ್ರತಿಯೊಂದು ತಾಲೂಕಿಗೂ ಪ್ರಯೋಜನವಾಗುವಂತೆ ನೀರಿನ ಹಂಚಿಕೆ ಮತ್ತು ವಿತರಣಾ ವ್ಯವಸ್ಥೆಯನ್ನು ರೂಪಿಸಬೇಕು. ವಿಶೇಷವಾಗಿ ಕೆಳಗಿನ ತಾಲೂಕುಗಳಿಗೆ ಆದ್ಯತೆ ನೀಡಬೇಕು.

ಶಿರಹಟ್ಟಿ ತಾಲೂಕು : ಶಿರಹಟ್ಟಿ ತಾಲೂಕು ಮಳೆ ಆಶ್ರಿತ ಕೃಷಿ ಪ್ರದೇಶವಾಗಿದ್ದು, ಅನೇಕ ಗ್ರಾಮಗಳು ಕುಡಿಯುವ ನೀರು ಮತ್ತು ಕೃಷಿಗೆ ಅಗತ್ಯವಾದ ನೀರಿನ ಕೊರತೆಯನ್ನು ಎದುರಿಸುತ್ತಿವೆ. ಆದ್ದರಿಂದ ತಾಲೂಕಿನ ಕೆರೆಗಳನ್ನು ತುಂಬಿಸುವುದು ಮತ್ತು ಅಂತರ್ಜಲ ಮರುಪೂರಣ–ಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದು ಯೋಜನೆಯ ಪ್ರಮುಖ ಆದ್ಯತೆಯಾಗಬೇಕು.

ಅರಣ್ಯ ಇಲಾಖೆಯ ಅಧಿಕೃತ ಪೋರ್ಟಲ್‌ನಲ್ಲಿ ಶಿರಹಟ್ಟಿ ಲಿಫ್ಟ್ ನೀರಾವರಿ ಯೋಜನೆಯಡಿ 20 ಕೆರೆಗಳನ್ನು ತುಂಬಿಸುವುದು ಹಾಗೂ ಅಂತರ್ಜಲ ಮರುಪೂರಣ ಮಾಡುವ ಉದ್ದೇಶಕ್ಕೆ ಸಂಬಂಧಿಸಿದ ಪೈಪ್‌ಲೈನ್ ಕಾಮಗಾರಿಗಾಗಿ ಅರಣ್ಯ ಭೂಮಿ ಬಳಕೆಯ ಪ್ರಸ್ತಾವನೆ ದಾಖಲಾಗಿದೆ. ಈ ಪ್ರಸ್ತಾವನೆಯ ಮುಂದಿನ ಪ್ರಕ್ರಿಯೆ ಮತ್ತು ಅನುಮತಿಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಿ, ಯೋಜನೆಯನ್ನು ಅನುಷ್ಠಾನಗೊಳಿಸುವತ್ತ ಸರ್ಕಾರ ಗಮನಹರಿಸಬೇಕು.

ಈಗಾಗಲೇ ಗುರುತಿಸಿರುವ ಕೆರೆ ತುಂಬಿಸುವ ಯೋಜನೆಗಳನ್ನು ಪೂರ್ಣಗೊಳಿಸಿ, ವರದಾ–ಬೆಡ್ತಿ ಯೋಜನೆಯಿಂದ ಹೆಚ್ಚುವರಿ ನೀರು ಲಭ್ಯವಾದಲ್ಲಿ ಅವುಗಳಿಗೆ ನೀರು ಒದಗಿಸುವ ಸಂಪರ್ಕ ವ್ಯವಸ್ಥೆಯನ್ನು ರೂಪಿಸಬೇಕು. ಇದರಿಂದ ಗ್ರಾಮೀಣ ಕುಡಿಯುವ ನೀರಿನ ಲಭ್ಯತೆ, ಕೆರೆಗಳ ಪುನಶ್ಚೇತನ ಮತ್ತು ಕೃಷಿ ಚಟುವಟಿಕೆಗಳಿಗೆ ಪೂರಕ ನೆರವು ದೊರೆಯಬಹುದು.

ಮುಂಡರಗಿ ತಾಲೂಕು : ಮುಂಡರಗಿ ತಾಲೂಕಿನ ಮಳೆ ಆಶ್ರಿತ ಕೃಷಿ ಪ್ರದೇಶಗಳಿಗೆ ಪೂರಕ ನೀರಾವರಿ ಕಲ್ಪಿಸುವ ಸಾಧ್ಯತೆಯನ್ನು ಪರಿಶೀಲಿಸಬೇಕು. ಸೂಕ್ತ ಜಲಾಶಯ ಮತ್ತು ಕೆರೆಗಳ ಸಂಪರ್ಕ ವ್ಯವಸ್ಥೆ ರೂಪಿಸುವ ಮೂಲಕ ನೀರಿನ ಸಂಗ್ರಹ ಹೆಚ್ಚಿಸಬಹುದು. ಇದರಿಂದ ಕೃಷಿ ಚಟುವಟಿ–ಕೆಗಳ ಜೊತೆಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆಗೂ ಅನುಕೂಲವಾಗಬಹುದು. ಈಗಾಗಲೇ ಪ್ರಸ್ತಾಪಿತವಾಗಿರುವ ಇತರ ಕೆರೆ ತುಂಬಿಸುವ ಯೋಜನೆಗಳೊಂದಿಗೆ ಸಮನ್ವಯ ಸಾಧಿಸುವುದೂ ಅಗತ್ಯವಾಗಿದೆ.

ಲಕ್ಷ್ಮೇಶ್ವರ ತಾಲೂಕು : ಲಕ್ಷ್ಮೇಶ್ವರ ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಮಳೆ ಕೊರತೆಯಾದಾಗ ಕೃಷಿ ಚಟುವಟಿಕೆಗಳು ತೀವ್ರ ಸಂಕಷ್ಟಕ್ಕೆ ಒಳಗಾಗುತ್ತವೆ. ಅಂತರ್ಜಲದ ಮೇಲಿನ ಹೆಚ್ಚುತ್ತಿರುವ ಅವಲಂಬನೆಯಿಂದ ರೈತರ ನೀರಾವರಿ ವೆಚ್ಚವೂ ಹೆಚ್ಚಾಗುತ್ತಿದೆ.

ಈ ಹಿನ್ನೆಲೆಯಲ್ಲಿ ವರದಾ–ಬೆಡ್ತಿ ಯೋಜನೆಯಿಂದ ದೊರೆಯಬಹುದಾದ ಹೆಚ್ಚುವರಿ ನೀರನ್ನು ಸೂಕ್ತ ಜಲಾಶಯ ಮತ್ತು ಕಾಲುವೆ ಸಂಪರ್ಕದ ಮೂಲಕ ತಾಲೂಕಿನ ನೀರಿನ ಕೊರತೆಯ ಗ್ರಾಮಗಳಿಗೆ ತಲುಪಿಸುವ ಸಾಧ್ಯತೆಯನ್ನು ತಾಂತ್ರಿಕವಾಗಿ ಪರಿಶೀಲಿಸಬೇಕು.

ಮಳೆ ಆಶ್ರಿತ ಕೃಷಿ ಪ್ರದೇಶಗಳಿಗೆ ಪೂರಕ ನೀರಾವರಿ ಸೌಲಭ್ಯ ಕಲ್ಪಿಸುವುದರ ಜೊತೆಗೆ ತೋಟಗಾರಿಕೆ, ತರಕಾರಿ ಬೆಳೆ ಮತ್ತು ಪಶುಸಂಗೋಪನೆಗೆ ಉತ್ತೇಜನ ನೀಡಬಹುದು. ಇದರಿಂದ ಕೃಷಿ ಆದಾಯ ಹೆಚ್ಚಿಸಲು ನೆರವಾಗಬಹುದು.

ಗದಗ–ಬೆಟಗೇರಿ : ಗದಗ–ಬೆಟೇರಿ ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ದೀರ್ಘಕಾಲೀನ ಕುಡಿಯುವ ನೀರಿನ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಈ ಯೋಜನೆಯ ಸಾಧ್ಯತೆಗಳನ್ನು ಪರಿಶೀಲಿಸಬೇಕು. ಸೂಕ್ತ ನೀರಿನ ಸಂಗ್ರಹ ಮತ್ತು ವಿತರಣಾ ವ್ಯವಸ್ಥೆ ರೂಪಿಸಿದರೆ ಕೆರೆಗಳ ಪುನಶ್ಚೇತನ ಹಾಗೂ ಅಂತರ್ಜಲ ಮರುಪೂರಣಕ್ಕೂ ಸಹಕಾ–ರಿಯಾಗಬಹುದು.

ರೋಣ ತಾಲೂಕು(ಗಜೇಂದ್ರಗಡ) : ರೋಣ ತಾಲೂಕಿನ ನೀರಿನ ಕೊರತೆಯ ಗ್ರಾಮಗಳಿಗೆ ನೀರು ತಲುಪಿಸುವ ವ್ಯವಸ್ಥೆ ರೂಪಿಸುವ ಮೂಲಕ ಬರಗಾಲದ ಸಂದರ್ಭದಲ್ಲಿ ಕೃಷಿ ಕ್ಷೇತ್ರ ಎದುರಿಸುವ ಸಂಕಷ್ಟವನ್ನು ತಗ್ಗಿಸಬಹುದು. ಕೆರೆಗಳ ಪುನಶ್ಚೇತನ, ಅಂತರ್ಜಲ ಮರುಪೂರಣ ಮತ್ತು ಕೃಷಿ ಭೂಮಿಗೆ ಪೂರಕ ನೀರಾವರಿ ಕಲ್ಪಿಸುವುದರಿಂದ ಬೆಳೆ ಉತ್ಪಾದನೆ ಸುಧಾರಿಸುವ ಸಾಧ್ಯತೆಯಿದೆ. ಇದರಿಂದ ರೈತರ ಜೀವನೋಪಾಯಕ್ಕೆ ಸ್ಥಿರತೆ ದೊರೆಯುವುದರ ಜೊತೆಗೆ ಉದ್ಯೋಗಕ್ಕಾಗಿ ನಡೆಯುವ ವಲಸೆಯನ್ನು ಕಡಿಮೆ ಮಾಡುವ ಅವಕಾಶವೂ ಸೃಷ್ಟಿಯಾಗಬಹುದು.

ಒಟ್ಟಾರೆ, ಜಿಲ್ಲೆಯ ಎಲ್ಲಾ ತಾಲೂಕುಗಳಿಗೂ ಸಮಾನ ಆದ್ಯತೆ ನೀಡಿ, ಪ್ರತಿ ತಾಲೂಕಿನ ಗ್ರಾಮವಾರು ನೀರಿನ ಅಗತ್ಯ, ಕೆರೆಗಳ ಸಾಮರ್ಥ್ಯ, ಜಲಾಶಯಗಳ ಸಂಪರ್ಕ ಮತ್ತು ಕಾಲುವೆಗಳ ಸಾಧ್ಯತೆಯನ್ನು ಗುರುತಿಸಿ ಪ್ರತ್ಯೇಕ ವಿತರಣಾ ಯೋಜನೆ ಸಿದ್ಧಪಡಿಸಬೇಕು.

ತಾಂತ್ರಿಕವಾಗಿ ಅನುಷ್ಠಾನಗೊಳಿಸಬೇಕಾದ ಪ್ರಮುಖ ಕಾಮಗಾರಿಗಳು : ಯೋಜನೆಯ ಯಶಸ್ಸಿಗೆ ಕೇವಲ ನದಿಗಳ ಸಂಪರ್ಕ ಸಾಕಾಗುವುದಿಲ್ಲ. ವೈಜ್ಞಾನಿಕವಾಗಿ ಸಮಗ್ರ ಜಲವಿತರಣಾ ವ್ಯವಸ್ಥೆಯನ್ನು ನಿರ್ಮಿಸಬೇಕು.

ನೀರಿನ ವರ್ಗಾವಣೆ : ಬೆಡ್ತಿ ನದಿಯಿಂದ ಲಭ್ಯವಿರುವ ಹೆಚ್ಚುವರಿ ನೀರನ್ನು ಸೂಕ್ತ ಜಲಾಶಯ ಅಥವಾ ಪಂಪಿಂಗ್ ವ್ಯವಸ್ಥೆಯ ಮೂಲಕ ವರದಾ ನದಿ ಜಲಾನಯನ ಪ್ರದೇಶಕ್ಕೆ ವರ್ಗಾಯಿಸಬೇಕು.

ಜಲಾಶಯಗಳ ನಿರ್ಮಾಣ ಮತ್ತು ಸಂಪರ್ಕ: ಧರ್ಮಾ ಸೇರಿದಂತೆ ಸೂಕ್ತ ಜಲಾಶಯಗಳ ಸಾಮರ್ಥ್ಯವನ್ನು ಪರಿಶೀಲಿಸಿ, ನೀರಿನ ಸಂಗ್ರಹ ಮತ್ತು ವಿತರಣೆಗೆ ವ್ಯವಸ್ಥೆ ಕಲ್ಪಿಸಬೇಕು.

ಎತ್ತುವ ನೀರಾವರಿ ವ್ಯವಸ್ಥೆ: ಭೌಗೋಳಿಕ ಎತ್ತರದ ವ್ಯತ್ಯಾಸಕ್ಕೆ ಅನುಗುಣವಾಗಿ ಪಂಪ್ ಹೌಸ್, ಪೈಪ್‌ಲೈನ್ ಮತ್ತು ವಿದ್ಯುತ್ ವ್ಯವಸ್ಥೆ ರೂಪಿಸಬೇಕು.

ಕೆರೆ ತುಂಬಿಸುವ ಯೋಜನೆ : ಗದಗ ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೆರೆ, ಕಟ್ಟೆ ಮತ್ತು ಸಣ್ಣ ಜಲಾಶಯಗಳಿಗೆ ನೀರು ತುಂಬಿಸುವ ವ್ಯವಸ್ಥೆ ಕಲ್ಪಿಸಬೇಕು.

ಅಂತರ್ಜಲ ಮರುಪೂರಣ : ಚೆಕ್‌ಡ್ಯಾಂ, ಮರುಪೂರಣ ಕೊಳಗಳು ಮತ್ತು ಮಳೆನೀರು ಸಂಗ್ರಹ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಬೇಕು.

ನೀರಿನ ಗುಣಮಟ್ಟ: ಕುಡಿಯುವ ನೀರಿನ ಬಳಕೆಗೆ ಅಗತ್ಯವಾದ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬೇಕು.

ಪ್ರತಿ ತಾಲೂಕಿನ ಗ್ರಾಮಗಳಿಗೆ ನೀರು ತಲುಪುವಂತೆ ಗುರುತ್ವಾಕರ್ಷಣೆ ಆಧಾರಿತ ಕಾಲುವೆಗಳು ಮತ್ತು ಅಗತ್ಯವಿರುವಲ್ಲಿ ಎತ್ತುವ ನೀರಾವರಿ ವ್ಯವಸ್ಥೆಯನ್ನು ಸಮನ್ವಯಗೊಳಿಸಬೇಕು.

ರೈತರ ಆರ್ಥಿಕ ಅಭಿವೃದ್ಧಿಗೆ ವರದಾನ:

ಗದಗ ಜಿಲ್ಲೆಯ ಆರ್ಥಿಕತೆಯ ಪ್ರಮುಖ ಆಧಾರ ಕೃಷಿಯಾಗಿದೆ. ಜೋಳ, ಕಡಲೆ, ಹತ್ತಿ, ಗೋವಿನಜೋಳ, ಸೂರ್ಯಕಾಂತಿ, ಈರುಳ್ಳಿ ಹಾಗೂ ತೋಟಗಾರಿಕೆ ಬೆಳೆಗಳು ಈ ಭಾಗದ ರೈತರ ಜೀವನೋಪಾಯವಾಗಿವೆ.

ನೀರಾವರಿ ಸೌಲಭ್ಯ ಹೆಚ್ಚಾದರೆ ರೈತರು ಕೇವಲ ಮುಂಗಾರು ಮಳೆಯನ್ನೇ ಅವಲಂಬಿಸುವ ಪರಿಸ್ಥಿತಿ ಕಡಿಮೆಯಾಗುತ್ತದೆ. ಬೆಳೆ ವೈವಿಧ್ಯೀಕರಣ, ಪಶುಸಂಗೋಪನೆ, ಹೈನುಗಾರಿಕೆ, ಆಹಾರ ಸಂಸ್ಕರಣಾ ಘಟಕಗಳು ಮತ್ತು ಕೃಷಿ ಆಧಾರಿತ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ದೊರೆಯಬಹುದು. ಯುವಕರು ಉದ್ಯೋಗಕ್ಕಾಗಿ ಬೆಂಗಳೂರು, ಹುಬ್ಬಳ್ಳಿ, ಪುಣೆ ಮತ್ತು ಗೋವಾ ಮುಂತಾದ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿಯೂ ಕಡಿಮೆಯಾಗುವ ಸಾಧ್ಯತೆಯಿದೆ.

ಸರ್ಕಾರಕ್ಕೆ ನಮ್ಮ ಪ್ರಮುಖ ಬೇಡಿಕೆಗಳು :

ಬೆಡ್ತಿವರದಾ ನದಿ ಜೋಡಣೆ ಯೋಜನೆಯ ಅಂತಿಮ ಆಕಖ ಮತ್ತು ಪರಿಷ್ಕೃತ ಕಈಖ ಅನ್ನು ತಕ್ಷಣ ಸಾರ್ವಜನಿಕಗೊಳಿಸಬೇಕುಗದಗ ಜಿಲ್ಲೆಯ ತಾಲೂಕುಗಳಾದ ಮುಂಡರಗಿ, ರೋಣ, ಶಿರಹಟ್ಟಿ, ಗದಗ, ಗಜೇಂದ್ರಗಡ ಮತ್ತು ನರಗುಂದ ಮತ್ತು ಲಕ್ಷ್ಮೇಶ್ವರಗಳಿಗೆ ನೀರು ಹಂಚಿಕೆ ಮಾಡುವ ಪ್ರತ್ಯೇಕ ಕ್ರಿಯಾ ಯೋಜನೆ ರೂಪಿಸಬೇಕು. ಪ್ರತಿ ತಾಲೂಕಿನ ಗ್ರಾಮವಾರು ಕೆರೆ ತುಂಬಿಸುವ ಯೋಜನೆಯನ್ನು ಸಿದ್ಧಪಡಿಸಬೇಕು. ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಿ ನಂತರ ಕೃಷಿ ಮತ್ತು ಇತರ ಬಳಕೆಗಳಿಗೆ ವೈಜ್ಞಾನಿಕ ಹಂಚಿಕೆ ಮಾಡಬೇಕು. ಯೋಜನೆಗೆ ಅಗತ್ಯವಿರುವ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒದಗಿಸಬೇಕು. ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಉತ್ತರ ಕರ್ನಾಟಕದ ಜನಪ್ರತಿನಿಧಿಗಳು, ರೈತ ಸಂಘಟನೆಗಳು, ಕಾನೂನು ತಜ್ಞರು ಮತ್ತು ತಾಂತ್ರಿಕ ತಜ್ಞರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಬೇಕು.

ಸರ್ಕಾರಕ್ಕೆ ಅಂತಿಮ ಎಚ್ಚರಿಕೆ: ನೀರಿಗಾಗಿ ಉತ್ತರ ಕರ್ನಾಟಕದ ಜನಾಂದೋಲನ! : ಶಿರಹಟ್ಟಿ, ಮುಂಡರಗಿ, ಲಕ್ಷ್ಮೇಶ್ವರ ಸೇರಿದಂತೆ ಗದಗ ಜಿಲ್ಲೆಯ ವಿವಿಧ ತಾಲೂಕುಗಳ ಜನರು ನೀರಿಗಾಗಿ ಇನ್ನೆಷ್ಟು ವರ್ಷ ಕಾಯಬೇಕು? ರೈತರು ಪ್ರತಿವರ್ಷ ಮಳೆಯ ನಿರೀಕ್ಷೆಯಲ್ಲೇ ಬದುಕು ಸಾಗಿಸಬೇಕೇ? ಗ್ರಾಮೀಣ ಮಹಿಳೆಯರು ಕುಡಿಯುವ ನೀರಿಗಾಗಿ ಪರದಾಡಬೇಕೇ? ಈ ಪ್ರಶ್ನೆಗಳಿಗೆ ರಾಜ್ಯ ಸರ್ಕಾರ ಸ್ಪಷ್ಟ ಉತ್ತರ ನೀಡಲೇಬೇಕು.

ಉತ್ತರ ಕರ್ನಾಟಕದ ಅಭಿವೃದ್ಧಿ ಕೇವಲ ಘೋಷಣೆಗಳಿಗೆ ಸೀಮಿತವಾಗಬಾರದು. ನೀರಾವರಿ ಯೋಜನೆಗಳ ಅನುಷ್ಠಾನದಲ್ಲಿ ಪ್ರಾದೇಶಿಕ ಸಮಾನತೆ ಮತ್ತು ಸಾಮಾಜಿ–ಕ ನ್ಯಾಯಕ್ಕೆ ಆದ್ಯತೆ ನೀಡಬೇಕು. ನೀರಿನ ಲಭ್ಯತೆ ಹೆಚ್ಚಿರುವ ಪ್ರದೇಶಗಳ ಜೊತೆಗೆ ನೀರಿನ ತೀವ್ರ ಕೊರತೆ ಎದುರಿಸುತ್ತಿರುವ ಗ್ರಾಮಗಳಿಗೂ ನ್ಯಾಯಯುತವಾಗಿ ನೀರು ತಲುಪುವ ವ್ಯವಸ್ಥೆ ರೂಪಿಸಬೇಕು.

ಆದ್ದರಿಂದ ರಾಜ್ಯ ಸರ್ಕಾರವು ವರದಾ–ಬೆಡ್ತಿ ನದಿ ಜೋಡಣೆ ಯೋಜನೆಯ ಪ್ರಯೋಜನವನ್ನು ಶಿರಹಟ್ಟಿ, ಮುಂಡರಗಿ, ಲಕ್ಷ್ಮೇಶ್ವರ, ಗದಗ, ರೋಣ, ಗಜೇಂದ್ರಗಡ ಮತ್ತು ನರಗುಂದ ಸೇರಿದಂತೆ ಗದಗ ಜಿಲ್ಲೆಯ ಎಲ್ಲ ತಾಲೂಕುಗಳಿಗೂ ತಲುಪಿಸುವ ಕುರಿತು ವಿಶೇಷ ಕ್ರಿಯಾ ಯೋಜನೆಯನ್ನು ಪ್ರಕಟಿಸಬೇಕು. ಗ್ರಾಮವಾರು ನೀರಿನ ಅಗತ್ಯ, ಜಲಾಶಯಗಳ ಸಂಪರ್ಕ, ಕೆರೆ ತುಂಬಿಸುವ ವ್ಯವಸ್ಥೆ ಮತ್ತು ನೀರಾವರಿ ಸೌಲಭ್ಯಗಳ ಕುರಿತು ಸ್ಪಷ್ಟ ರೂಪುರೇಷೆ ಸಿದ್ಧಪಡಿಸಿ, ಅನುಮೋದನೆ ಹಾಗೂ ಕಾಮಗಾರಿಗಳ ಪ್ರಗತಿಗೆ ಕಾಲಮಿತಿ ನಿಗದಿಪಡಿಸಬೇಕು.

ವರದಾ–ಬೆಡ್ತಿ ನದಿ ಜೋಡಣೆ ಯೋಜನೆ ಯಾವುದೇ ಒಂದು ರಾಜಕೀಯ ಪಕ್ಷದ ಅಥವಾ ವ್ಯಕ್ತಿಯ ವೈಯಕ್ತಿಕ ಬೇಡಿಕೆಯಲ್ಲ. ಇದು ಉತ್ತರ ಕರ್ನಾಟಕದ ಜನರ ಬದುಕು, ರೈತರ ಭವಿಷ್ಯ ಮತ್ತು ಮುಂದಿನ ಪೀಳಿಗೆಯ ನೀರಿನ ಭದ್ರತೆಗೆ ಸಂಬಂಧಿಸಿದ ನ್ಯಾಯಯುತ ಜನಪರ ಬೇಡಿಕ

ಬಾಲ್ಯ ವಿವಾಹ, ಮಕ್ಕಳ ಕಳ್ಳಸಾಗಣೆ ತಡೆಗೆ ಎಲ್ಲರೂ ಕೈಜೋಡಿಸಿ : ನ್ಯಾಯಾಧೀಶ ಬಿರಾದಾರ ದೇವಿಂದ್ರಪ್ಪ

ಹಾವೇರಿ : ಬಾಲ್ಯವಿವಾಹ, ಮಕ್ಕಳ ಅಪಹರಣ, ಮಾನವ ಕಳ್ಳಸಾಗಣೆ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಗೆ ಸಂಬಂಧಿಸಿದ ಕಾನೂನುಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಇಂತಹ ಪ್ರಕರಣಗಳ ನಿಯಂತ್ರಣಕ್ಕೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿರಾದಾರ ದೇವೇಂದ್ರಪ್ಪ ಎನ್. ಹೇಳಿದರು.

ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಬುಧವಾರ ಬೆಂಗಳೂರು ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯುಕ್ತಾಶ್ರಯದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಆಯೋಜಿಸಿದ್ದ ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಹಾಗೂ ಪೋಕ್ಸೊ ಕಾಯ್ದೆ–2012 ಕುರಿತ ತರಬೇತಿ ಕಾರ್ಯಕ್ರಮ ಮತ್ತು ರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಕಾನೂನುಬದ್ಧ ದತ್ತು ಸ್ವೀಕಾರದ ಕುರಿತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳನ್ನು ದತ್ತು ಪಡೆಯುವ ಪದ್ಧತಿ ಹಿಂದಿನಿಂದಲೂ ರೂಢಿಯಲ್ಲಿದೆ. ಆದರೆ ಪ್ರಸ್ತುತ ದತ್ತು ಸ್ವೀಕಾರಕ್ಕೆ ಕಾನೂನಾತ್ಮಕ ಚೌಕಟ್ಟು ರೂಪುಗೊಂಡಿದ್ದು, ಸರ್ಕಾರ ನಿಗದಿಪಡಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಅನಧಿಕೃತವಾಗಿ ಅಥವಾ ಕೇವಲ ಮಾತುಕತೆ, ಪತ್ರಗಳ ಮೂಲಕ ಮಕ್ಕಳನ್ನು ದತ್ತು ಪಡೆದರೆ ಮುಂದಿನ ದಿನಗಳಲ್ಲಿ ಆಸ್ತಿ ಹಕ್ಕು ಸೇರಿದಂತೆ ಹಲವು ಕಾನೂನು ಸಮಸ್ಯೆಗಳು ಎದುರಾಗಬಹುದು. ಆದ್ದರಿಂದ ಮಕ್ಕಳನ್ನು ದತ್ತು ಪಡೆಯುವವರು ಕಾನೂನುಬದ್ಧ ಪ್ರಕ್ರಿಯೆಯನ್ನೇ ಅನುಸರಿಸಬೇಕು ಎಂದರು.



ಮಕ್ಕಳಿಲ್ಲದ ದಂಪತಿಗಳ ಆಸೆ ಹಾಗೂ ಹಣದ ಆಮಿಷವನ್ನು ದುರುಪಯೋಗಪಡಿಸಿಕೊಂಡು ಕೆಲವು ವ್ಯಕ್ತಿಗಳು ಮಕ್ಕಳನ್ನು ಅಕ್ರಮವಾಗಿ ಪಡೆದು ಮಾರಾಟ ಮಾಡುವ ಪ್ರಕರಣಗಳು ನಡೆಯುತ್ತಿವೆ. ಮಕ್ಕಳನ್ನು ಭಿಕ್ಷಾಟನೆ, ಲೈಂಗಿಕ ಶೋಷಣೆ ಹಾಗೂ ಅಂಗಾಂಗ ಕಳ್ಳಸಾಗಣೆಯಂತಹ ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಅಪಾಯವಿದೆ. ಇಂತಹ ಅಪರಾಧಗಳನ್ನು ತಡೆಗಟ್ಟಲು ಸಾರ್ವಜನಿಕರು ಜಾಗೃತರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಡಾ. ನಾಗರಾಜ ಎಲ್. ಮಾತನಾಡಿ, ದತ್ತು ಸ್ವೀಕಾರವು ಕಾನೂನುಬದ್ಧವಾಗಿ ನಡೆಯುವುದು ಅತ್ಯಂತ ಮುಖ್ಯ. ಅನಧಿಕೃತವಾಗಿ ಮಕ್ಕಳನ್ನು ದತ್ತು ಪಡೆಯುವುದರಿಂದ ಮುಂದೆ ಹಲವು ಕಾನೂನು ತೊಡಕುಗಳು ಉಂಟಾಗಬಹುದು. ಆದ್ದರಿಂದ ಸರ್ಕಾರದ ನಿಯಮಾನುಸಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ದತ್ತು ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸಲಹೆ ನೀಡಿದರು.

ಮಕ್ಕಳ ಅಪಹರಣ, ಮಾನವ ಕಳ್ಳಸಾಗಣೆ, ಭಿಕ್ಷಾಟನೆಗೆ ಮಕ್ಕಳನ್ನು ಬಳಸಿಕೊಳ್ಳುವುದು ಹಾಗೂ ಲೈಂಗಿಕ ಶೋಷಣೆಯಂತಹ ಅಪರಾಧಗಳ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಮಕ್ಕಳು ಕಾಣೆಯಾದಾಗ ಅಥವಾ ಅಸುರಕ್ಷಿತ ಸ್ಥಿತಿಯಲ್ಲಿ ಕಂಡುಬಂದಾಗ ತಕ್ಷಣ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಬೇಕು. ಮಕ್ಕಳ ಸುರಕ್ಷತೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕರು, ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಗ್ರಾಮಮಟ್ಟದ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಗ್ರಾಮ ಮತ್ತು ಶಾಲಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸಿ ಬಾಲ್ಯವಿವಾಹ ಮುಕ್ತ ಹಾವೇರಿ ಜಿಲ್ಲೆಯ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮಕ್ಕಳನ್ನು ಅನಧಿಕೃತವಾಗಿ ಖರೀದಿಸುವುದು ಅಥವಾ ಮಾರಾಟ ಮಾಡುವುದು ಕಾನೂನುಬಾಹಿರ ಅಪರಾಧವಾಗಿದೆ. ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ–2015ರ ಕಲಂ 80 ಮತ್ತು 81ರಡಿ ಇಂತಹ ಕೃತ್ಯಗಳಿಗೆ ಶಿಕ್ಷೆ ಹಾಗೂ ದಂಡ ವಿಧಿಸಲು ಅವಕಾಶವಿದೆ. ಮಕ್ಕಳು ಅನಾಥ ಅಥ–'ವಾ ಅಸಹಾಯಕ ಸ್ಥಿತಿಯಲ್ಲಿ ಕಂಡುಬಂದಲ್ಲಿ ತಕ್ಷಣ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಿರಾದಾರ ದೇವೇಂದ್ರಪ್ಪ ಎನ್. ಅವರು ಮಕ್ಕಳ ರಕ್ಷಣೆಯ ಕುರಿತು ಪ್ರತಿಜ್ಞಾವಿಧಿ ಬೋಧಿಸಿದರು. ಮಕ್ಕಳ ಮಾರಾಟ ತಡೆ ಹಾಗೂ ಕಾನೂನುಬದ್ಧ ದತ್ತು ಸ್ವೀಕಾರದ ಕುರಿತು ಜಾಗೃತಿ ಮೂಡಿಸುವ ಬಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಿಐಡಿ ಆಡಳಿತ ವಿಭಾಗದ ಪೊಲೀಸ್ ಇಲಾಖೆಯ ರೋಹಿತ್ ಸಿ.ಜೆ. ಅವರು ಬಾಲ್ಯವಿವಾಹ ನಿಷೇಧ ಕಾಯ್ದೆ–2006, ಪೋಕ್ಸೊ ಕಾಯ್ದೆ–2012, ಮಕ್ಕಳ ರಕ್ಷಣೆ ಹಾಗೂ ಕಾನೂನುಬದ್ಧ ದತ್ತು ಪ್ರಕ್ರಿಯೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಇದಕ್ಕೂ ಮೊದಲು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಿರಾದಾರ ದೇವೇಂದ್ರಪ್ಪ ಎನ್. ಅವರು ರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾನೂನುಬದ್ಧ ದತ್ತು ಸ್ವೀಕಾರದ ಕುರಿತು ಜಾಗೃತಿ ಪ್ರಚಾರಾಂದೋಲನ ಹಾಗೂ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಮತಿ ಶ್ರೀಶೈಲಜಾ ಹೆಚ್.ಎ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರೇವತಿ ಎಸ್. ಹೊಸಮಠ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ಗೀತಾ ಪಾಟೀಲ, ಸಮಿತಿಯ ಸದಸ್ಯ ಮೂಲಿಮನಿ, ಶಾಲಾ ಶಿಕ್ಷಣ ಇಲಾಖೆಯ ಹಾಲ್ ಸಿದ್ದಪ್ಪ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ದತ್ತು ಮಾಸಾಚರಣೆ

ಪಾಂಡವ ನ್ಯೂಸ್, ಹಾವೇರಿ : ನವೆಂಬರ್–2026 ತಿಂಗಳನ್ನು ರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಪ್ರತಿ ಮಗುವೂ ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವುದು ಪ್ರತಿಯೊಂದು ಮಗುವಿನ ಹಕ್ಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.ಮಗುವಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತಾವರಣವನ್ನು ಕಲ್ಪಿಸುತ್ತದೆ. ಈ ನಿಟ್ಟಿನಲ್ಲಿ ದತ್ತು ಪ್ರಕ್ರಿಯೆಯು ಅನಾಥ, ಪರಿತ್ಯಕ್ತ ಹಾಗೂ ಒಪ್ಪಿಸಲ್ಪಟ್ಟ ಮಕ್ಕಳ ಪುನರ್ವಸತಿಗೆ ನೆರವಾಗುವುದು ಮಕ್ಕಳ ರಕ್ಷಣಾ ಯೋಜನೆಯ ಉದ್ದೇಶವಾಗಿದೆ.ನವೆಂಬರ್–2026ರ ಘೋಷವಾಖ್ಯ:"ಓಠ ಖ್ಯಠಡಿಣಭಿಣಣ ಣಠ ಕಚಿಡಿಜಟಿಣ್ಯಠಠಜ–ಔಟಿಟಥಿ ಏಜಠಚಿಟ ರಜಠಠಿ–ಣಃಠಟಿ/ ಪೋಷಕರಾಗಲು ಯಾವುದೇ ಅಡ್ಡ ದಾರಿಗಳಿಲ್ಲ–ಕಾನೂನು ಬದ್ಧ ದತ್ತು ಸ್ವೀಕಾರವೊಂದೇ ಸರಿಯಾದ ಮಾರ್ಗ" ಎಂಬ ಕುರಿತು ವ್ಯಾಪಕ ಪ್ರಚಾರದೊಂದಿಗೆ ರಾಷ್ಟ್ರೀಯದತ್ತು ಮಾಸಾಚರಣೆ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಪೋಷಕತ್ವಯೋಜನೆ ಕಾನೂನು ಬದ್ಧದತ್ತು ಹಾಗೂ ಕಾನೂನು ಬಾಹಿರ ದತ್ತು ಪ್ರಕ್ರಿಯೆಅಪರಾಧ, ಮಕ್ಕಳ ಮಾರಾಟಅಪರಾಧ ಮಕ್ಕಳನ್ನು ಮಾರುವವರಿಗೂ ಹಾಗೂ ಕೊಳ್ಳುವವರಿಗೂ ಬಾಲನ್ಯಾಯ ಕಾಯ್ದೆ–2015 ಸೆಕ್ಷನ್ 81ರ ಅನ್ವಯ 5 ವರ್ಷಗಳವರೆಗೂ ಸೆರೆಮನೆ ವಾಸದೊಂದಿಗೆ 1 ಲಕ್ಷ ರೂ.ಗಳ ದಂಡ ವಿಧಿಸಬಹುದು.ಈ ಅಪರಾಧದಲ್ಲಿ ಆಸ್ಪತ್ರೆಯವರು ಶಾಮಿಲಾದರೆ ಶಿಕ್ಷೆಯ ಅವಧಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಇರುವ ಬಗ್ಗೆ ಜನರಲ್ಲಿಅ–ರಿವು ಮೂಡಿಸಲಾಗುತ್ತಿದೆ. ಸಾರ್ವಜನಿಕರ ಗಮನಕ್ಕೆ ಅನಾಥ, ಪರಿತ್ಯಕ್ತ ಮತ್ತುಒಪ್ಪಿಸಲ್ಪಟ್ಟ ಮಕ್ಕಳ ಮಾಹಿತಿಕಂಡುಬಂದಲ್ಲಿ ಹಾವೇರಿ ಜಿಲ್ಲಾ ಮಕ್ಕಳ ರಕ್ಷಣಾಘಟಕ ದೂ.08375–233062, ಹಾವೇರಿ ಸ್ಪಂದನಾ ವಿಶೇಷ ದತ್ತುಕೇಂದ್ರ ಹಾಗೂ ಮಕ್ಕಳ ಸಹಾಯವಾಣಿ 1098/112ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಸ್ಥಾನದಲ್ಲಿ ರೈಲು ಹಳಿ ಸ್ಫೋಟ

ಪಾಂಡವ ನ್ಯೂಸ್, ಜೈಪುರ : ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ರೈಲು ಹಳಿಯಲ್ಲಿ ಸಂಭವಿಸಿದ ಸ್ಫೋಟದಿಂದ ಹಳಿಗೆ ಆಧಾರವಾಗಿದ್ದ ಎರಡು ಕಾಂಕ್ರಿಟ್ ಬ್ಲಾಕ್‌ಗಳು ಹಾನಿಗೊಳಗಾಗಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಸೂರತ್‌ಗಢ್‌ಅನೂಪ್‌ಗಢ್ ಮಾರ್ಗದ ರೈಲು ಸಂಚಾರವನ್ನು ಸ್ಥಗಿ–ತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.50 ಜಿಬಿ ಗ್ರಾಮದ ಸಮೀಪ ಸ್ಫೋಟ ಸಂಭವಿಸಿದೆ. ಪ್ರಯಾಣಿಕ ರೈಲೊಂದು 45 ನಿಮಿಷಗಳ ಬಳಿಕ ಸ್ಫೋಟ ಸಂಭವಿಸಿದೆ ಪೊಲೀಸರು ತಿಳಿಸಿದ್ದಾರೆ.ಸ್ಫೋಟದ ತೀವ್ರತೆಗೆ ರೈಲು ಹಳಿಯ ಕೆಳಭಾಗದಲ್ಲಿದ್ದ ಎರಡು ಕಾಂಕ್ರಿಟ್ ಬ್ಲಾಕ್‌ಗಳು ಹಾನಿಗೊಂಡಿದ್ದು, ಸುಮಾರು ಎರಡು ಅಡಿ ಆಳದ ಕುಳಿಯೊಂದು ನಿರ್ಮಾಣವಾಗಿದೆ. ಘಟನಾ ಸ್ಥಳದಿಂದ ಸುಮಾರು 200 ಮೀಟರ್ ದೂರದಲ್ಲಿ ವಾಸಿಸುತ್ತಿದ್ದ ಗ್ರಾಮಸ್ಥರು ಸ್ಫೋಟದ ಶಬ್ದ ಕೇಳಿ ರೈಲು ಹಳಿಯತ್ತ ಧಾವಿಸಿದ್ದಾರೆ.

ಗ್ರಾಮೀಣ ಶಾಲೆಗಳ ಅಭಿವೃದ್ಧಿಗೆ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್‌ನಿಂದ 7.50 ಲಕ್ಷ ನೆರವು

ಪಾಂಡವ ನ್ಯೂಸ್, ಹಾನಗಲ್ಲ : ಗ್ರಾಮೀಣ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆ ಹಾಗೂ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಲೊಯೋಲಾ ವಿಕಾಸ ಕೇಂದ್ರ, ಹಾನಗಲ್ಲ ಮತ್ತು ಬೆಂಗಳೂರಿನ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಹಯೋಗದಲ್ಲಿ ತಾಲ್ಲೂಕಿನ ವಿವಿಧ ಸರ್ಕಾರಿ ಶಾಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಲೊಯೋಲಾ ವಿಕಾಸ ಕೇಂದ್ರದ ಸಮಾಜ ಕಾರ್ಯಕರ್ತರು ಶಾಲೆಗಳಿಗೆ ಭೇಟಿ ನೀಡಿ, ಮುಖ್ಯಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರೊಂದಿಗೆ ಚರ್ಚಿಸಿ ಅಗತ್ಯ ಸೌಲಭ್ಯಗಳನ್ನು ಗುರುತಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಾರೆ.

2026ನೇ ಸಾಲಿನಲ್ಲಿ ದಶರಥಕೊಪ್ಪ ಮತ್ತು ಹೊತನಹಳ್ಳಿ ಸರ್ಕಾರಿ ಶಾಲೆಗಳಿಗೆ ಬಣ್ಣ ಬಳಿಯಲಾಗಿದೆ. ಶಿರಗೋಡ ಶಾಲೆಗೆ ಕುಡಿಯುವ ನೀರಿನ ಫಿಲ್ಟರ್, ಬಾಳೇಹಳ್ಳಿ ಶಾಲೆಗೆ 20 ಬೆಂಚ್ ಹಾಗೂ 20 ಡೆಸ್ಕ್, ಶೃಂಗೇರಿ ಶಾಲೆಗೆ ಪ್ರಿಂಟರ್ ಮತ್ತು ಸವಣೂರು ಶಾಲೆಗೆ ಸ್ಮಾರ್ಟ್‌ಬೋರ್ಡ್ ಒದಗಿಸಲಾಗಿದೆ.

ಈ ಕಾರ್ಯಗಳಲ್ಲಿ ಗ್ರಾಮಸ್ಥರ ಸಹಭಾಗಿ–ತ್ವವೂ ಗಮನಾರ್ಹವಾಗಿದೆ. ದಶರಥಕೊಪ್ಪ ಮತ್ತು ಹೊತನಹಳ್ಳಿಯಲ್ಲಿ ಶಾಲಾಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಗ್ರಾಮಸ್ಥರು ಬಣ್ಣ ಬಳಿಯುವ ಕೆಲಸದ ಕೂಲಿ ವೆಚ್ಚ ಭರಿಸಿದ್ದಾರೆ. ಸವಣೂರು ಶಾಲೆಯಲ್ಲಿ ಸ್ಮಾರ್ಟ್‌ಬೋರ್ಡ್ ಬಳಕೆಗೆ ಅಗತ್ಯವಾದ ಇನ್ವರ್ಟರ್ ವ್ಯವಸ್ಥೆಯನ್ನು ಗ್ರಾಮಸ್ಥರೇ ಒದಗಿಸಿದ್ದಾರೆ.

ಇದಕ್ಕೂ ಮುನ್ನ 2025ರಲ್ಲಿ ಇನಾಂ ನೀರಲಗಿ ಶಾಲೆಗೆ ಸ್ಮಾರ್ಟ್‌ಬೋರ್ಡ್ ಮತ್ತು ಧ್ವಜಸ್ತಂಭ ಒದಗಿಸಲಾಗಿತ್ತು. ಕತ್ತಿಕೊಪ್ಪ ಸರ್ಕಾರಿ ಶಾಲೆಗೆ ಬಣ್ಣ ಬಳಿಯುವ ಕಾರ್ಯ ಕೈಗೊಳ್ಳಲಾಗಿತ್ತು.

ಈ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು ಸುಮಾರು 7.50 ಲಕ್ಷ ವಿನಿಯೋಗಿಸಲಾಗಿದ್ದು,



ಬೆಂಗಳೂರಿನ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆ ಆರ್ಥಿಕ ನೆರವು ನೀಡಿದೆ. ಶಾಲೆಗಳ ಅಭಿವೃದ್ಧಿಯಲ್ಲಿ ಗ್ರಾಮಸ್ಥರು, ಪಾಲಕರು ಹಾಗೂ ಸ್ಥಳೀಯ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಬೆಳೆಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಶಾಲೆ ಕೇವಲ ಮಕ್ಕಳ ಕಲಿಕೆಯ ಸ್ಥಳವಲ್ಲ; ಅದು ಇಡೀ ಗ್ರಾಮದ ಭವಿಷ್ಯ ರೂಪಿಸುವ ಕೇಂದ್ರ. ಈ ಅರಿವು ಸಮುದಾಯದಲ್ಲಿ ಮೂಡಿದಾಗ ಸರ್ಕಾರಿ ಶಾಲೆಗಳ ಅಭಿವೃದ್ಧಿ ಸುಸ್ಥಿರವಾಗಲು ಸಾಧ್ಯ ಎಂದು ಯೋಜನೆಯ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.

'ಗ್ರಾಮೀಣ ಶಾಲೆಗಳು ಸುಸ್ಥಿರವಾಗಬೇಕು. ಮೂಲಸೌಕರ್ಯದ ಜತೆಗೆ ಆಧುನಿಕ ಸೌಲಭ್ಯಗಳೂ ಹಳ್ಳಿಗಳಿಗೆ ತಲುಪಬೇಕು. ಖಾಸಗಿ ಸಂಸ್ಥೆಗಳೊಂದಿಗೆ ಗ್ರಾಮಸ್ಥರೂ ಶಾಲೆಗಳ ಅಭಿವೃದ್ಧಿಯ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂಬುದು ನಮ್ಮ ಉದ್ದೇಶ' ಎಂದು ಲೊಯೋಲಾ ವಿಕಾಸ ಕೇಂದ್ರದ ನಿರ್ದೇಶಕ ಫಾದರ್ ವಿನ್ಸೆಂಟ್ ಜೈಸನ್ ತಿಳಿಸಿದ್ದಾರೆ.

'ನಮ್ಮ ಸಂಸ್ಥೆಯ ವತಿಯಿಂದ ಲೊಯೋಲಾ ವಿಕಾಸ ಕೇಂದ್ರದ ಮೂಲಕ ಹಾನಗಲ್ಲ ತಾಲ್ಲೂಕಿನ ಶಾಲೆಗಳಿಗೆ ಆರ್ಥಿಕ ನೆರವು ನೀಡಲಾಗಿದೆ.

ಗ್ರಾಮೀಣ ಭಾಗದ ಮಕ್ಕಳು ಉತ್ತಮ ಶಿಕ್ಷಣ ಪಡೆಯಲಿ ಎಂಬುದು ನಮ್ಮ ಆಶಯ' ಎಂದು ಬೆಂಗಳೂರಿನ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಫಾದರ್ ರೋಶನ್ ಪಿರೇರಾ ಹೇಳಿದ್ದಾರೆ.

ಡಿವೈಎಫ್‌ಐ 46ನೇ ಸಂಸ್ಥಾಪನಾ ದಿನಾಚರಣೆ

ಯುವಜನತೆ ಸಂಘಟಿತರಾದರೆ ಮಾತ್ರ ಘನತೆಯ ಬದುಕು ಸಾಧ್ಯ: ಬಸವರಾಜ ಪೂಜಾರ

ಪಾಂಡವ ನ್ಯೂಸ್, ಹಾವೇರಿ : ನಿರುದ್ಯೋಗ, ಕೋಮುವಾದ ಹಾಗೂ ಶಿಕ್ಷಣದ ವ್ಯಾಪಾರೀಕರಣದಿಂದ ಯುವಜನರ ಭವಿಷ್ಯ ಅತಂತ್ರವಾಗುತ್ತಿದೆ. ಈ ಸವಾಲುಗಳ ವಿರುದ್ಧ ಯುವಜನತೆ ಸಂಘಟಿತರಾಗಿ ಹೋರಾಡಿದಾಗ ಮಾತ್ರ ಘನತೆಯ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ಡಿವೈಎಫ್‌ಐ ರಾಷ್ಟ್ರೀಯ ಮುಖಂಡ ಬಸವರಾಜ ಪೂಜಾರ ಹೇಳಿದರು.

ನಗರದ ಶಿವಾಜಿ ನಗರದ 2ನೇ ಕ್ರಾಸ್‌ನಲ್ಲಿರುವ ಎಸ್–ಎಫ್‌ಐ–ಡಿವೈಎ ಡಿವೈಎಫ್‌ಐ ಕಚೇರಿ ಎದುರು ಡಿವೈ–ಎಫ್‌ಐ ಜಿಲ್ಲಾ ಸಮಿತಿ ಆಯೋಜಿಸಿದ್ದ 46ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. 1980ರ ನ.3ರಂದು ಪಂಜಾಬ್‌ನ ಲುಧಿಯಾನದಲ್ಲಿ ಸ್ಥಾಪನೆಯಾದ ಡಿವೈಎಫ್‌ಐ, ಕಳೆದ 46 ವರ್ಷಗಳಿಂದ ಯುವಜನರ ಉದ್ಯೋಗದ ಹಕ್ಕು ಹಾಗೂ ಘನತೆಯ ಬದುಕಿಗಾಗಿ ಹೋರಾಡುತ್ತಿದೆ. ಈ ಹೋರಾಟದಲ್ಲಿ ನೂರಾರು ಯುವಕರು ಪ್ರಾಣತ್ಯಾಗ ಮಾಡಿದ್ದಾರೆ. ಅವರ ತ್ಯಾಗ, ಬಲಿದಾನಕ್ಕೆ ಗೌರವ ಸಲ್ಲಿಸುವ ಜವಾಬ್ದಾರಿ ಇಂದಿನ ಯುವಪೀಳಿಗೆಯ ಮೇಲಿದೆ ಎಂದರು.

ಸರ್ಕಾರಗಳು ಕಾರ್